# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (154) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೆಚ್ಚಿನ ಆರ್ಥಿಕ ಪ್ರತ್ಯಾಯೋಜನೆ ಮಾಡುವ ಕುರಿತು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 636 ಎಂಎನ್‌ವೈ 2010-11 ದಿನಾಂಕ: 02.04.2011ರ ಅನ್ವಯ ಈ ಕೆಳಕಂಡಂತೆ ಪಾಲಿಕೆಯ ವಿವಿಧ ಪ್ರಾಧಿಕಾರಗಳಿಗೆ ಆರ್ಥಿಕ ಅಧಿಕಾರ ನೀಡಿ ಕಾರ್ಯನಿರ್ವಹಿಸಲು ಆದೇಶವಾಗಿರುತ್ತದೆ.

ಎ) ಕಾಮಗಾರಿ ಅಂದಾಜು ಪಟ್ಟಿ ಅನುಮೋದನೆ

| ಮಂಜೂರಾತಿ ಪ್ರಾಧಿಕಾರ | ಹಾಲಿ ಇರುವ ಮೊತ್ತ (ರೂ.ಲಕ್ಷಗಳಲ್ಲಿ) | ಮಾರ್ಪಾಡು ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| ಆಯುಕ್ತರು | 300.00 | 50.00 |
| ಸ್ಥಾಯಿ ಸಮಿತಿ | 300.00 ರಿಂದ 400.00 | 200.00 |
| ಪಾಲಿಕೆ ಸಭೆ | 400.00 ರಿಂದ 500.00 | 500.00 |
| ಸರ್ಕಾರ | 500.00 ಲಕ್ಷಗಳಿಗೆ ಮೇಲ್ಪಟ್ಟು | -- |

ಬಿ) ಕಾಮಗಾರಿ ಟೆಂಡರ್ ಅನುಮೋದನೆ

| ಮಂಜೂರಾತಿ ಪ್ರಾಧಿಕಾರ | ಹಾಲಿ ಇರುವ ಮೊತ್ತ (ರೂ.ಲಕ್ಷಗಳಲ್ಲಿ) | ಮಾರ್ಪಾಡು ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| ಆಯುಕ್ತರು | 300.00 ಲಕ್ಷಗಳವರೆಗೆ | 60.00 ಲಕ್ಷಗಳವರೆಗೆ |
| ಸ್ಥಾಯಿ ಸಮಿತಿ | 300.00 ರಿಂದ 400.00 | 250.00 ಲಕ್ಷಗಳವರೆಗೆ |
| ಪಾಲಿಕೆ ಸಭೆ | 400.00 ರಿಂದ 500.00 | 500.00 ಲಕ್ಷಗಳವರೆಗೆ |
| ಸರ್ಕಾರ | 500.00 ಲಕ್ಷಗಳಿಗೆ ಮೇಲ್ಪಟ್ಟು | 500.00 ಲಕ್ಷಗಳಿಗೆ ಮೇಲ್ಪಟ್ಟು |

ಸದರಿ ಆದೇಶದನ್ವಯ ರೂ.5.00 ಕೋಟಿಗಿಂತ ಹೆಚ್ಚಿನ ಕಾಮಗಾರಿಗಳ ಅಥವಾ ಸೇವೆಗಳನ್ನು ಪಡೆದುಕೊಳ್ಳುವ ಪ್ರಸ್ತಾವನೆಗಳಿಗೆ ಆಡಳಿತಾತ್ಮಕ ಅನುಮೋದನೆ ಸರ್ಕಾರದ ಒಪ್ಪಿಗೆ ಅವಶ್ಯವಾಗಿರುತ್ತದೆ.

ಇಂತಹ ಪ್ರಸ್ತಾವನೆಗಳ ಅನುಮೋದನೆಗೆ ಸ್ಥಾಯಿ ಸಮಿತಿಗಳ, ಪಾಲಿಕೆ ಮತ್ತು ಸರ್ಕಾರದ ಹಂತದಲ್ಲಿ ಪರಿಶೀಲನೆ ಮತ್ತು ಅನುಮೋದನೆಗೆ ಸುಮಾರು 6 ತಿಂಗಳಿಂದ ಒಂದು ವರ್ಷದ ಕಾಲಾವಧಿ ಹಿಡಿಯುತ್ತದೆ. ಕೆಲವು ಪ್ರಕರಣಗಳಲ್ಲಿ ಇನ್ನೂ ಹೆಚ್ಚಿನ ಸಮಯ ತೆಗೆದುಕೊಂಡಿರುವ ಸಹ ಉದಾಹರಣೆಗಳುಂಟು.

ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು ಕಾಲಮಿತಿಯೊಳಗೆ ನಿರ್ವಹಿಸದಿದ್ದಲ್ಲಿ, ಅನೇಕ ಸಂದರ್ಭಗಳಲ್ಲಿ ಕಾಮಗಾರಿಗಳ ವೆಚ್ಚ ಹೆಚ್ಚುವರಿಯಾಗಿ ಪಾಲಿಕೆಗೆ ಆರ್ಥಿಕ ಹೊರೆಯಾಗುತ್ತದೆ. ಸಾರ್ವಜನಿಕರ ಹಾಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಮತ್ತು ಸೇವೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಮತ್ತು ಅನಗತ್ಯ ಆರ್ಥಿಕ ಹೊರೆಯನ್ನು ತಪ್ಪಿಸುವ ಸಲುವಾಗಿ ಆರ್ಥಿಕ ಮಿತಿಯನ್ನು ರೂ.5.00 ಕೋಟಿಗಳಿಂದ ರೂ.20.00 ಕೋಟಿಗಳಿಗೆ ಹೆಚ್ಚಿಸಿದ್ದೇ ಆದಲ್ಲಿ ಅನೇಕ ಸಾರ್ವಜನಿಕ ಕಾಮಗಾರಿಗಳನ್ನು ಪಾಲಿಕೆಯ ಮಟ್ಟದಲ್ಲೇ ಅನುಮೋದಿಸಿಕೊಂಡು ಅನುಷ್ಠಾನಗೊಳಿಸಲು ಅನುಕೂಲಕರವಾಗುವುದು.

..................2

ಆದ್ದರಿಂದ, ಪಾಲಿಕೆಗೆ ಈಗಿರುವ ಆರ್ಥಿಕ ಪ್ರತ್ಯಾಯೋಜನೆಯನ್ನು ರೂ.5.00 ಕೋಟಿಯಿಂದ ರೂ.20.00 ಕೋಟಿಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದುಕೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 30-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುತ್ತಾ, ರೂ.5.00 ಕೋಟಿಯಿಂದ ಹೆಚ್ಚಿನ ಮೊತ್ತದ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದ ಅನುಮೋದನೆಯ ಬದಲಾಗಿ ಅನುಮೋದನೆಯ ಅಧಿಕಾರವನ್ನು ಪಾಲಿಕೆ ಮಟ್ಟದಲ್ಲಿಯೇ ಉಳಿಸಿಕೊಂಡು, ಪ್ರಸ್ತಾವನೆಯನ್ನು ಅನುಮೋದಿಸಿಕೊಂಡು ಅನುಷ್ಠಾನಗೊಳಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುತ್ತಾ, ರೂ.5.00 ಕೋಟಿಯಿಂದ ಹೆಚ್ಚಿನ ಮೊತ್ತದ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರದ ಅನುಮೋದನೆಯ ಬದಲಾಗಿ ಅನುಮೋದನೆಯ ಅಧಿಕಾರವನ್ನು ಪಾಲಿಕೆ ಮಟ್ಟದಲ್ಲಿಯೇ ಉಳಿಸಿಕೊಂಡು, ಪ್ರಸ್ತಾವನೆಯನ್ನು ಅನುಮೋದಿಸಿಕೊಂಡು ಅನುಷ್ಠಾನಗೊಳಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (156) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರುಗಳಿಗೆ ವೈದ್ಯಕೀಯ ಚಿಕಿತ್ಸೆಗಾಗಿ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಿಗೆ ವೈದ್ಯಕೀಯ ವೆಚ್ಚಗಳು" ಲೆಕ್ಕ ಶೀರ್ಷಿಕೆಯಡಿಯಲ್ಲಿ ಆಯವ್ಯಯದಲ್ಲಿ ಹಣವನ್ನು ಮೀಸಲಿಡಲಾಗುತ್ತಿದ್ದು, ಕಳೆದ 2011-12ನೇ ಸಾಲಿನ ಆಯವ್ಯಯದಲ್ಲಿ ರೂ.50 ಲಕ್ಷಗಳನ್ನು ಇದಕ್ಕಾಗಿ ಮೀಸಲಿಡಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರುಗಳು ತಮ್ಮ ಸ್ವಂತ ವೈದ್ಯಕೀಯ ಚಿಕಿತ್ಸೆಗಾಗಿ ಸದರಿ ಅನುದಾನದ ಅಡಿಯಲ್ಲಿ ವೈದ್ಯಕೀಯ ವೆಚ್ಚ ಭರಿಸಲು ಅರ್ಜಿ ಸಲ್ಲಿಸುತ್ತಿದ್ದಾರೆ. ಆದರೆ, ಈ ಬಗ್ಗೆ ಪಾಲಿಕೆಯಲ್ಲಿ ಸೂಕ್ತ ಮಾರ್ಗಸೂಚಿಗಳು ಇರುವುದಿಲ್ಲ. ಈ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಇರುವ ವೈದ್ಯಕೀಯ ಚಿಕಿತ್ಸೆ ನಿಯಮಗಳಂತೆ ಪಾಲಿಕೆಯಯಲ್ಲೂ ಸಹ ಕೆಲವು ಅಗತ್ಯ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿದೆ. ಆದ್ದರಿಂದ ಪಾಲಿಕೆ ಸದಸ್ಯರುಗಳಿಗೆ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿದೆ.

1. ಪಾಲಿಕೆಯಿಂದ ಭರಿಸುವ ವೈದ್ಯಕೀಯ ವೆಚ್ಚ ಮರುಪಾವತಿಯು ನಗರ ಪಾಲಿಕೆಯ ಹಾಲಿ ಸದಸ್ಯರಿಗೆ ಮಾತ್ರ ಸೀಮಿತವಾಗಿರತಕ್ಕದ್ದು.
2. ಪಾಲಿಕೆಯ ಸದಸ್ಯರುಗಳಿಗೆ ವೈದ್ಯಕೀಯ ವೆಚ್ಚದ ಮರು ಪಾವತಿಯನ್ನು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮದನ್ವಯ ಅರ್ಹ ಮೊತ್ತಕ್ಕೆ ಮಾತ್ರ ಪಾವತಿಸಲಾಗುವುದು.
3. ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಸರ್ಕಾರವು ಗುರುತಿಸಿರುವ ಆಸ್ಪತ್ರೆಗಳಲ್ಲಿ ಮಾತ್ರ, ಪಾಲಿಕೆಯ ಸದಸ್ಯರು ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ, ಸದರಿ ವೆಚ್ಚವನ್ನು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮದನ್ವಯ ಮರು ಪಾವತಿಸಲಾಗುವುದು.
4. ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮದನ್ವಯ ರೋಗದ ಸಂಬಂಧ ಔಷಧ, ಎಕ್ಸ್‌ರೇ ಹಾಗೂ ಶಸ್ತ್ರಚಿಕಿತ್ಸೆಗಳು ಇವುಗಳಿಗೆ ಸಂಬಂಧಪಟ್ಟಂತೆ ಮಾತ್ರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲಾಗುವುದು. ಸಾಮಾನ್ಯ ಖಾಯಿಲೆಗಳಾದ ಜ್ವರ, ನೆಗಡಿ, ಕೆಮ್ಮು, ಆಯುರ್ವೇದಿಕ್ ಚಿಕಿತ್ಸೆ ಹಾಗೂ ಇತರೇ ಖಾಯಿಲೆಗಳಿಗೆ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸಲಾಗುವುದಿಲ್ಲ.
5. ಕಣ್ಣಿಗೆ ಹಾಗೂ ಹಲ್ಲಿಗೆ ಸಂಬಂಧಿಸಿದಂತೆ ಚಿಕಿತ್ಸೆಗಳು, ಶಸ್ತ್ರ ಚಿಕಿತ್ಸೆಗಳಿಗೆ ಮಾತ್ರ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡಲಾಗುವುದು. ಆದರೆ, ಕಣ್ಣಿನ ಕನ್ನಡಕ, ಹಲ್ಲಿನ ಬಿಡಿ ಭಾಗಗಳು ಹಾಗೂ ಹೊಸ ಹಲ್ಲುಗಳನ್ನು ಅಳವಡಿಸಲು ತಗಲುವ ಮೊತ್ತವನ್ನು ಭರಿಸಲು ಅವಕಾಶ ಇರುವುದಿಲ್ಲ.
6. ನಗರ ಪಾಲಿಕೆಯ ಸದಸ್ಯರುಗಳು ವೈದ್ಯಕೀಯ ವೆಚ್ಚ ಮರು ಪಾವತಿಯನ್ನು ಆಯಾಯ ಆರ್ಥಿಕ ವರ್ಷದಲ್ಲಿಯೇ ಪಡೆಯಲು ಅರ್ಜಿ ಸಲ್ಲಿಸಬೇಕು ಹಾಗೂ ಹಿಂದಿನ ವರ್ಷದ ವೈದ್ಯಕೀಯ ವೆಚ್ಚಗಳಿಗೆ ಮರು ಪಾವತಿಯನ್ನು ಪಡೆಯಲು ಅರ್ಹರಿರುವುದಿಲ್ಲ.
7. ಪಾಲಿಕೆಯ ಸದಸ್ಯರುಗಳು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಅವರು ಆಸ್ಪತ್ರೆಗಳಲ್ಲಿ ದೊರೆಯುವ ಸಾಮಾನ್ಯ ವಸತಿ ಸೌಲಭ್ಯಗಳನ್ನು ಮಾತ್ರ ಪಡೆದಲ್ಲಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಆಗುವುದು. ಉನ್ನತ ದರ್ಜೆಯ ವಸತಿ ಸೌಲಭ್ಯಗಳನ್ನು ಪಡೆದಲ್ಲಿ, ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಅವಕಾಶ ಇರುವುದಿಲ್ಲ.
8. ನಗರ ಪಾಲಿಕೆ ಸದಸ್ಯರು ವೈದ್ಯಕೀಯ ಚಿಕಿತ್ಸೆಗೆ ಒಳರೋಗಿಗಳಾಗಿ ದಾಖಲಾದಲ್ಲಿ 48 ಘಂಟೆಯೊಳಗಾಗಿ ಪೂಜ್ಯ ಮಹಾಪೌರರಿಗೆ ಹಾಗೂ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಲಿಖಿತ ಮಾಹಿತಿಯನ್ನು ನೀಡಬೇಕು. ಈ ರೀತಿ ಮಾಹಿತಿ ನೀಡದಿದ್ದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಭರಿಸಲಾಗುವುದಿಲ್ಲ.

....................2

9. ನಗರ ಪಾಲಿಕೆ ಸದಸ್ಯರು ಆಸ್ಪತ್ರೆಗೆ ದಾಖಲಾಗಿ ವೈದ್ಯಕೀಯ ಚಿಕಿತ್ಸೆ ಪೂರ್ಣಗೊಂಡ ನಂತರದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿ ಕೋರಿ ಅರ್ಜಿ ಸಲ್ಲಿಸಬೇಕು. ಸದರಿ ಅರ್ಜಿಯೊಂದಿಗೆ ನಗರ ಪಾಲಿಕೆ ಸದಸ್ಯರು ಆರೋಗ್ಯ ಸುಧಾರಣೆ ಪಡೆದಿರುವ ಬಗ್ಗೆ ಸಂಬಂಧಪಟ್ಟ ಆಸ್ಪತ್ರೆಯ ತಜ್ಞ ವೈದ್ಯರಿಂದ ದೃಢೀಕರಣ ಪತ್ರ ಹಾಗೂ ಮೂಲ ಬಿಲ್ಲುಗಳನ್ನು ಸಲ್ಲಿಸಬೇಕು. ಈ ಪತ್ರದಲ್ಲಿ ಖಾಯಿಲೆಯ ಸ್ವರೂಪ, ಸದರಿ ಚಿಕಿತ್ಸೆಗೆ ವೆಚ್ಚವಾಗಿರುವ ಮೊತ್ತ ಇತ್ಯಾದಿ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.
10. ನಗರ ಪಾಲಿಕೆ ಸದಸ್ಯರು ವೈದ್ಯಕೀಯ ವೆಚ್ಚ ಮರುಪಾವತಿ ಕೋರಿ ಸಲ್ಲಿಸುವ ಅರ್ಜಿ ಮತ್ತು ಬಿಲ್ಲುಗಳನ್ನು ಕೌನ್ಸಿಲ್ ಕಾರ್ಯಾರ್ದರ್ಶಿಯವರು ವಲಯ ಆರೋಗ್ಯ ವೈದ್ಯಾಧಿಕಾರಿಗಳಿಗೆ ಕಳುಹಿಸುವುದು. ವಲಯ ಆರೋಗ್ಯ ವೈದ್ಯಾಧಿಕಾರಿಗಳು ಸದರಿಯವರ ವೈದ್ಯಕೀಯ ಬಿಲ್ಲುಗಳನ್ನು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ನಮೂದಿಸಿ ಮೂಲ ಬಿಲ್, ಅವಶ್ಯಕ ದಾಖಲಾತಿಗಳನ್ನು ಪಡೆದು ವಲಯ ಆಯುಕ್ತರುಗಳ ಶಿಫಾರಸ್ಸಿನೊಂದಿಗೆ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಸಲ್ಲಿಸುವುದು. ನಂತರ ಕೌನ್ಸಿಲ್ ಕಾರ್ಯದರ್ಶಿಯವರು ಕಡತಗಳನ್ನು ಮಾನ್ಯ ಆಯುಕ್ತರ ಅನುಮೋದನೆಗೆ ಮಂಡಿಸಿ ಅವರಿಂದ ಸೂಕ್ತ ಆರ್ಥಿಕ ಮಂಜೂರಾತಿ ಪಡೆದು ಹಣವನ್ನು ಚೆಕ್ ಮೂಲಕ ಪಾಲಿಕೆ ಸದಸ್ಯರಿಗೆ ನೀಡಲು ಕಡತವನ್ನು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಕಳುಹಿಸುವುದು.
11. ನಗರ ಪಾಲಿಕೆ ಸದಸ್ಯರುಗಳಿಗೆ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವಾಗ ಆಯಾ ಲೆಕ್ಕ ಶೀರ್ಷಿಕೆಗೆ ಮತ್ತು ಮೊತ್ತಕ್ಕೆ ಮಾತ್ರ ಸೀಮಿತಗೊಳಿಸಬೇಕು ಹಾಗೂ ಈ ವೆಚ್ಚಗಳನ್ನು ಭರಿಸಿರುವುದಕ್ಕೆ ಮೂಲ ಬಿಲ್ ಇತ್ಯಾದಿಯನ್ನು ಪಡೆದುಕೊಂಡು ಖಾತ್ರಿಪಡಿಸಿಕೊಂಡು ಮರು ಪಾವತಿಸಬೇಕು ಹಾಗೂ ಲೆಕ್ಕ ಪರಿಶೋಧನೆಗಾಗಿ ಸಂಬಂಧಪಟ್ಟ ಕಡತವನ್ನು ರಕ್ಷಿಸಿಡುವುದು.

ಮೇಲ್ಕಂಡ ಮಾರ್ಗಸೂಚಿಗಳನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ;16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (157) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಬಡ ಹಾಗೂ ಮಧ್ಯಮ ವರ್ಗದ ಆರ್ಥಿಕವಾಗಿ ಹಿಂದುಳಿದ ನಾಗರೀಕರು ವೈದ್ಯಕೀಯ ಚಿಕಿತ್ಸೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸುಮಾರು ಐದು (5) ಕೋಟಿಗಳಷ್ಟು ಹಣವನ್ನು ಹಾಗೂ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.8 ಕೋಟಿಗಳಷ್ಟು ಆಯವ್ಯಯದಲ್ಲಿ ಮೀಸಲಿಡಲಾಗುತ್ತಿರುತ್ತದೆ.

ತತ್ಸಂಬಂಧ, ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಯಿಂದ ಹಾಗೂ ಪಾಲಿಕೆ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳ ಅಡಿಯಲ್ಲಿ ಧನ ಸಹಾಯ ಕೋರಿ ಸಾರ್ವಜನಿಕರು ಅರ್ಜಿ ಸಲ್ಲಿಸುತ್ತಿದ್ದು, ಸಾರ್ವಜನಿಕರಿಗೆ / ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ಫಲಾನುಭವಿಗಳಿಗೆ ವೈದ್ಯಕೀಯ ಸಹಾಯ ಶೀಘ್ರವಾಗಿ ತಲುಪಲು ಅನುಕೂಲವಾಗುವಂತೆ ಉಲ್ಲೇಖಿತ-1, 2 ಮತ್ತು 3ರ ಆದೇಶಗಳಂತೆ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಹಾಗೂ ತಿದ್ದುಪಡಿ ಆದೇಶಗಳನ್ನು ಜಾರಿಗೆ ತಂದು ವೈದ್ಯಕೀಯ ಧನ ಸಹಾಯವನ್ನು ಬಿಡುಗಡೆ ಮಾಡಲಾಗುತ್ತಿರುತ್ತದೆ.

ಆದರೆ, ಈ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಮಂಜೂರು ಮಾಡುತ್ತಿರುವ ವೈದ್ಯಕೀಯ ಸಹಾಯ ಧನವು ದುರುಪಯೋಗವಾಗುತ್ತಿರುವುದಾಗಿ ಹಲವಾರು ಪತ್ರಿಕೆಗಳಲ್ಲಿ ಹಾಗೂ ಸಾರ್ವಜನಿಕರಿಂದ ದೂರುಗಳು ಬರುತ್ತಿರುತ್ತದೆ. ಈ ರೀತಿಯ ದುರುಪಯೋಗವನ್ನು ತಡೆಗಟ್ಟಲು ಹಾಗೂ ಸಾರ್ವಜನಿಕರಿಗೆ ಪಾಲಿಕೆಯ ವತಿಯಿಂದ ನೀಡುತ್ತಿರುವ ವೈದ್ಯಕೀಯ ಪರಿಹಾರ ಸಹಾಯ ಧನವು ಸಕಾಲದಲ್ಲಿ ಹಾಗೂ ಸೂಕ್ತ ರೀತಿಯಲ್ಲಿ ಸಹಾಯ ತಲುಪಲು ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ಅಳವಡಿಸುವುದು ಅವಶ್ಯಕವಿದೆ. ಈ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳನ್ನೊಳಗೊಂಡಂತೆ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿದೆ.

### ವೈದ್ಯಕೀಯ ಧನ ಸಹಾಯ ಮಂಜೂರು ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳು

1. ಅರ್ಜಿದಾರರು ತಾವು ಖಾಯಿಲೆಯಿಂದ ಬಳಲುತ್ತಿರುವ ಬಗ್ಗೆ ಸಂಬಂಧಪಟ್ಟ ಆಸ್ಪತ್ರೆಯ ತಜ್ಞ ವೈದ್ಯರಿಂದ ದೃಢೀಕರಣ ಪತ್ರ ನೀಡಬೇಕು. ಈ ಪತ್ರದಲ್ಲಿ ಖಾಯಿಲೆಯ ಸ್ವರೂಪ, ಸದರಿ ಖಾಯಿಲೆಯ ಚಿಕಿತ್ಸೆಗೆ ವೆಚ್ಚವಾಗುವ ಅಂದಾಜು ಮೊತ್ತ ಇತ್ಯಾದಿ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಅರ್ಜಿದಾರರು ಸದರಿ ವೈದ್ಯಕೀಯ ದೃಢೀಕರಣ ಪ್ರಮಾಣ ಪತ್ರವನ್ನು ವೈದ್ಯರಿಂದ ಪಡೆದು, ಪಾಲಿಕೆಯು ನಿಗಧಿಪಡಿಸಿರುವ ನಮೂನೆಯಲ್ಲಿ ಭರ್ತಿಮಾಡಿ ಭಾವಚಿತ್ರದೊಂದಿಗೆ ಸಲ್ಲಿಸಬೇಕು.
2. ಧನ ಸಹಾಯವನ್ನು ಆಯಾ ಚಾಲ್ತಿ ಆರ್ಥಿಕ ವರ್ಷದ ಚಿಕಿತ್ಸೆಗೆ ಮಾತ್ರ (ಏಪ್ರಿಲ್ ಯಿಂದ ಮಾರ್ಚ್ ವರೆಗೆ) ನೀಡುವುದು. ಹಳೆಯ ವರ್ಷಗಳ ಬಿಲ್ಲುಗಳನ್ನು ಸಲ್ಲಿಸಿ, ವೈದ್ಯಕೀಯ ಧನ ಸಹಾಯವನ್ನು ಕೋರುವ ಪ್ರಕರಣವನ್ನು ತಿರಸ್ಕರಿಸುವುದು.

....................2

3. ಅರ್ಜಿದಾರರು ಸಹಾಯ ಧನ ಕೋರಿ ಸಲ್ಲಿಸುವ ಅರ್ಜಿಗಳನ್ನು ವಲಯ ಆರೋಗ್ಯ ಅಧಿಕಾರಿಗಳಿಗೆ ಕಳುಹಿಸಿ, ಸದರಿಯವರು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ನಮೂದಿಸಿ ಶಿಫಾರಸ್ಸು ಮಾಡಬೇಕು.
4. ಪೂಜ್ಯ ಮಹಾಪೌರರ ಹಾಗೂ ಪಾಲಿಕೆ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ಅನುದಾನವನ್ನು ಈ ಕೆಳಕಂಡ ವೈದ್ಯಕೀಯ ಚಿಕಿತ್ಸೆಗಳಿಗೆ ಮಾತ್ರ ಹಣವನ್ನು ಬಿಡುಗಡೆ ಮಾಡಲು ಹಾಗೂ ಈ ವೈದ್ಯಕೀಯ ಚಿಕಿತ್ಸೆಗಳಿಗೆ ಕನಿಷ್ಠ ರೂ.25,000/- ಗಳಿಂದ ಗರಿಷ್ಠ ರೂ.40,000/- ಗಳನ್ನು ಬಿಡುಗಡೆ ಮಾಡಬಹುದಾಗಿರುತ್ತದೆ.
   (ಎ) ಹೃದಯ ಸಂಬಂಧಿ ಖಾಯಿಲೆಗಳೂ
   (ಬಿ) ಕ್ಯಾನ್ಸರ್
   (ಸಿ) ಕಿಡ್ನಿ ವೈಫಲ್ಯ
   (ಡಿ) ಮೆದುಳಿಗೆ ಸಂಬಂಧಿಸಿದ ಖಾಯಿಲೆ (ಬ್ರೈನ್ ಟ್ಯೂಮರ್)
   (ಇ) ಇತರೆ ಪ್ರಮುಖ ಶಸ್ತ್ರಚಿಕಿತ್ಸೆಗೊಳಪಡುವ ಖಾಯಿಲೆಗಳು.
5. ವೈದ್ಯಕೀಯ ಅನುದಾನದ ಅಡಿಯಲ್ಲಿ ಮೇಲ್ಕಂಡ ಚಿಕಿತ್ಸೆಗಳನ್ನು ಹೊರತುಪಡಿಸಿ ಇನ್ನುಳಿದ ಯಾವುದೇ ಧನ ಸಹಾಯ ನೀಡುವ ಮುನ್ನ ಪೂಜ್ಯ ಮಹಾಪೌರರಿಗೆ ಮಾಹಿತಿಯೊಂದಿಗೆ ಕಡತ ಸಲ್ಲಿಸಿ, ಅವರ ಅನುಮೋದನೆ ಪಡೆಯುವುದು ಹಾಗೂ ಸದರಿ ಚಿಕಿತ್ಸೆಗಳಿಗೆ ಕನಿಷ್ಠ ರೂ.10,000/- ಗಳಿಂದ ಗರಿಷ್ಠ ರೂ.20,000/- ಗಳನ್ನು ಬಿಡುಗಡೆ ಮಾಡಬಹುದಾಗಿರುತ್ತದೆ. ಇದೇ ರೀತಿ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ಅನುದಾನ ನೀಡುವಾಗಲು ಸಹ ಇದನ್ನು ಅಳವಡಿಸಿಕೊಳ್ಳುವುದು.
6. ಅಪಘಾತ ಪ್ರಕರಣಗಳಲ್ಲಿ ಮತ್ತು ಇತರೆ ಗಂಭೀರ ಖಾಯಿಲೆ ಪ್ರಕರಣಗಳಲ್ಲಿ ಹೆಚ್ಚಿನ ಪರಿಹಾರವನ್ನು ನೀಡಲು ಲಭ್ಯವಿರುವ ಬಿಲ್ಲುಗಳ ಆಧಾರದ ಮೇಲೆ ಪೂಜ್ಯ ಮಹಾಪೌರರು / ಪಾಲಿಕೆ ಸದಸ್ಯರು ಕನಿಷ್ಠ ಹಾಗೂ ಗರಿಷ್ಠ ಮೊತ್ತವನ್ನು ನಿರ್ಧರಿಸಬಹುದಾಗಿದೆ.
7. ಅಪಘಾತ ಪ್ರಕರಣಗಳಲ್ಲಿ ಪೋಲಿಸ್ ವರದಿಯನ್ನು ಪಡೆದು ಅಪಘಾತದ ಗಂಭೀರತೆಯ ಬಗ್ಗೆ ಸಂಬಂಧಪಟ್ಟ ಪ್ರದೇಶದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರವರಿಂದ ವೈದ್ಯಕೀಯ ಮೊತ್ತ ನೀಡುವ ಬಗ್ಗೆ ಸೂಕ್ತ ಶಿಫಾರಸ್ಸು ಪಡೆದು ರೋಗಿಯ ಬ್ಯಾಂಕ್‌ನ ಖಾತೆಗೆ ಚೆಕ್ ಅನ್ನು ನೀಡಬಹುದಾಗಿದೆ.
8. ಪ್ರಸ್ತಾಪಿತ ವೈದ್ಯಕೀಯ ಅನುದಾನಗಳ ಅಡಿಯಲ್ಲಿ ಸಾಮಾನ್ಯ ಖಾಯಿಲೆಗಳಿಗೆ ಧನ ಸಹಾಯ ನೀಡುವ ಪ್ರಸ್ತಾವನೆಗಳನ್ನು ತಿರಸ್ಕರಿಸುವುದು. (ಜ್ವರ, ನೆಗಡಿ, ಕೆಮ್ಮು, ದಮ್ಮು, ಆಯುರ್ವೇದಿಕ್ ಮಸ್ಸಾಜ್ ಚಿಕಿತ್ಸೆ ಹಾಗೂ ಇನ್ನಿತರೆ ಸಾಮಾನ್ಯ ಖಾಯಿಲೆಗಳು).
9. ಆಸ್ಪತ್ರೆಗಳಲ್ಲಿ ಹಾಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಅವರಿಂದ ಸೂಕ್ತ ದಾಖಲಾತಿಗಳನ್ನು ಪಡೆದು ನೇರವಾಗಿ ಆಸ್ಪತ್ರೆಯ ಹೆಸರಿಗೆ ಚೆಕ್ ಅನ್ನು ಪತ್ರ ಮುಖೇನ ಕಳುಹಿಸುವುದು. ಒಂದು ವೇಳೆ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದಲ್ಲಿ, ಚಿಕಿತ್ಸೆಯನ್ನು ದೃಢಪಡಿಸಿಕೊಂಡ ಬಗ್ಗೆ ಅಗತ್ಯ ದಾಖಲೆಗಳನ್ನು ಪಡೆದು, ವಲಯ ಆರೋಗ್ಯ ವೈದ್ಯಾಧಿಕಾರಿಗಳ ಹಾಗೂ ಮುಖ್ಯ ಆರೋಗ್ಯ ಅಧಿಕಾರಿಗಳ ವರದಿ ಆಧಾರದ ಮೇಲೆ ಮೂಲ ಬಿಲ್ಲುಗಳನ್ನು ಪಡೆದು ರೋಗಿಯ ಅಥವಾ ಚಿಕಿತ್ಸೆ ಪಡೆದ ವಾರಸುದಾರರ ಬ್ಯಾಂಕ್‌ನ ಖಾತೆಯ ಸಂಖ್ಯೆಯ ಹೆಸರಿಗೆ ಚೆಕ್ ಅನ್ನು ನೀಡಬಹುದಾಗಿದೆ.
10. ವೈದ್ಯಕೀಯ ನಿಧಿಯಿಂದ ಮುಂಗಡ ಧನ ಸಹಾಯ ಕೋರಿ ಮನವಿ ಸಲ್ಲಿಸುವ ಪ್ರಕರಣಗಳಿಗೆ ಮಂಜೂರಾತಿಯ ಅರ್ಧ ಮೊತ್ತವನ್ನು ಮುಂಗಡವಾಗಿ ಆಸ್ಪತ್ರೆಯ ಹೆಸರಿಗೆ ಚೆಕ್ ಅನ್ನು ನೀಡಿ ನಂತರದಲ್ಲಿ ಆಸ್ಪತ್ರೆಯಿಂದ ನೀಡುವ ಮೂಲ ಬಿಲ್ಲುಗಳನ್ನು ಮತ್ತು ಡಿಸ್ಚಾರ್ಜ್ ವರದಿಯನ್ನು ಪಡೆದು ಉಳಿದ ಮೊತ್ತವನ್ನು ರೋಗಿಯು ಪಾವತಿಸಿದ್ದರೆ, ಆ ಹಣವನ್ನು ರೋಗಿಯ ಬ್ಯಾಂಕ್ ಖಾತೆಯ ಹೆಸರಿಗೆ ನೀಡುವುದು.

..................3

11. ವೈದ್ಯಕೀಯ ಪರಿಹಾರ ನಿಧಿಯಿಂದ ಸಹಾಯ ಧನ ಕೋರಿ ಮನವಿ ಸಲ್ಲಿಸುವ ಅರ್ಜಿದಾರರುಗಳು ಮೊದಲು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಪ್ರಾಶಸ್ತ್ಯ ನೀಡುವುದು, ಒಂದು ವೇಳೆ ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಿಲ್ಲದಿದ್ದಲ್ಲಿ ಮೇಲ್ಕಂಡ ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.
12. ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಕಡು ಬಡವರು, ಆರ್ಥಿಕವಾಗಿ ಹಿಂದುಳಿದವರು ಹಾಗೂ ಅಲ್ಪ ಸಂಖ್ಯಾತ ವರ್ಗದವರಿಗೆ ಅನುಕೂಲವಾಗುವಂತೆ ಚಿಕಿತ್ಸೆಯನ್ನು ಪಡೆಯಲು ಹಲವಾರು ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಪಾಲಿಕೆಯ ವತಿಯಿಂದ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ನೀಡಲಾಗುತ್ತಿರುತ್ತದೆ. ಈ ಹಿನ್ನಲೆಯಲ್ಲಿ, ಪೂಜ್ಯ ಮಹಾಪೌರರ ವೈದ್ಯಕೀಯ ಧನ ಸಹಾಯ ಕೋರಿ ಅರ್ಜಿ ಸಲ್ಲಿಸುವ ಫಲಾನುಭವಿಗಳು ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ಪಡೆದಿದ್ದಲ್ಲಿ ಅಂತಹವರ ಅರ್ಜಿಗಳನ್ನು ತಿರಸ್ಕರಿಸಬಹುದು. ಇಲ್ಲದಿದ್ದಲ್ಲಿ, ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ನೀಡದಿರುವ ಬಗ್ಗೆ ವಲಯ ಆರೋಗ್ಯ ವೈದ್ಯಾಧಿಕಾರಿಗಳು ದೃಢೀಕರಿಸಿ, ಫಲಾನುಭವಿಗಳಿಗೆ ವೈದ್ಯಕೀಯ ಧನ ಸಹಾಯ ನೀಡಲು ಮೇಲ್ಕಂಡ ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.
13. ಅರ್ಜಿದಾರರು ಸಲ್ಲಿಸುವ ಮನವಿಯನ್ನು ಪೂಜ್ಯ ಮಹಾಪೌರರ ಕಛೇರಿಯಿಂದ ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳ ಕಛೇರಿಗೆ ರವಾನಿಸಿ, ಆಯಾ ವಲಯದ ಆರೋಗ್ಯ ವೈದ್ಯಾಧಿಕಾರಿಗಳು ಅರ್ಜಿದಾರರ ಖಾಯಿಲೆ ಬಗ್ಗೆ ಆಸ್ಪತ್ರೆ / ವಾಸಸ್ಥಳಕ್ಕೆ ಭೇಟಿ ನೀಡಿ ಖಾಯಿಲೆ, ಖಾಯಿಲೆಯ ಸ್ವರೂಪ ಹಾಗೂ ನೈಜತೆಯ ಬಗ್ಗೆ ವರದಿ ಪಡೆದುಕೊಂಡು ಸರ್ಕಾರದ ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ಟಿಪ್ಪಣಿ ಹಾಳೆಯಲ್ಲಿ ಸಮರ್ಪಕವಾಗಿ ದೃಢೀಕರಿಸಿ, ಆರೋಗ್ಯ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ಮುಖ್ಯ ಆರೋಗ್ಯ ಅಧಿಕಾರಿಗಳ ಮುಖೇನ ಸಂಬಂಧಪಟ್ಟವರಿಗೆ ಮಂಡಿಸುವುದು. ಇದೇ ರೀತಿ ಪಾಲಿಕೆ ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನ ನೀಡುವ ಬಗ್ಗೆ ವಲಯ ಆಯುಕ್ತರುಗಳು ಕ್ರಮವಹಿಸುವುದು
14. ವೈದ್ಯಕೀಯ ವೆಚ್ಚಗಳಿಗೆ ಪಾಲಿಕೆ ನಿಧಿಯಿಂದ ಅನುದಾನವನ್ನು ನೀಡುವಾಗ ಆಯಾ ಲೆಕ್ಕ ಶೀರ್ಷಿಕೆಗೆ ಮಾತ್ರ ಸೀಮಿತಗೊಳಿಸಬೇಕು ಹಾಗೂ ಈ ವೆಚ್ಚಗಳನ್ನು ಮಾಡಿರುವುದಕ್ಕೆ ಮೂಲ ಬಿಲ್ ಇತ್ಯಾದಿಯನ್ನು ಪಡೆದುಕೊಂಡು ಖಾತ್ರಿಪಡಿಸಿಕೊಂಡು ಸಹಾಯ ನೀಡುವುದು ಹಾಗೂ ಲೆಕ್ಕ ಪರಿಶೋಧನೆಗಾಗಿ ಸಂಬಂಧಪಟ್ಟ ಕಡತವನ್ನು ರಕ್ಷಿಸಿಡುವುದು.
15. ಈ ಪರಿಹಾರವನ್ನು ಆರ್ಥಿಕವಾಗಿ ದುರ್ಬಲವಾದ ವ್ಯಕ್ತಿ / ಕುಟುಂಬಗಳಿಗೆ ಮಾತ್ರ ನೀಡಬಹುದ್ದಾಗಿದ್ದು, ಈ ಬಗ್ಗೆ ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಅಥವಾ ರೂ.20,000/-ಗಳ ವಾರ್ಷಿಕ ಆದಾಯದ ಒಳಗೆ ಇರುವವರಿಗೆ ಮಾತ್ರ ನೀಡುವುದು ಹಾಗೂ ಅವರ ಆದಾಯ ಪ್ರಮಾಣ ಪತ್ರವನ್ನು ಪಡೆದು ನೀಡುವುದು.
16. ಪ್ರಸ್ತಾಪಿತ ಅನುದಾನದಡಿಯ ವೈದ್ಯಕೀಯ ಧನ ಸಹಾಯದ ಕಡತಗಳನ್ನು ಒಂದು (1) ವಾರದ ಒಳಗಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟವರು ಕ್ರಮವಹಿಸುವುದು.

ಮೇಲ್ಕಂಡ ಮಾರ್ಗಸೂಚಿಗಳನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಹಾಲಿ ಇರುವ ಪದ್ಧತಿಯಂತೆ ಮುಂದುವರೆಸಲು ಈ ಸಭೆಯು ತೀರ್ಮಾನಿಸುತ್ತಾ, ಹಿಂದಿನ ಎರಡು ಸಾಲುಗಳ ಅಂದಾಜು 950 ಕಡತಗಳ ವಿಲೇವಾರಿಗಾಗಿ ರೂ.500.00 ಲಕ್ಷಗಳ ಹೆಚ್ಚಿನ ಅನುದಾನವನ್ನು ಮರು ಹೊಂದಾಣಿಕೆ ಮಾಡಿಕೊಂಡು, ಬಿಡುಗಡೆ ಮಾಡಲು ಆಯುಕ್ತರು ಕ್ರಮ ಕೈಗೊಳ್ಳುವುದು".

....................4

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ಹಾಲಿ ಇರುವ ಪದ್ಧತಿಯಂತೆ ಮುಂದುವರೆಸಲು ಈ ಸಭೆಯು ತೀರ್ಮಾನಿಸುತ್ತಾ, ಹಿಂದಿನ ಎರಡು ಸಾಲುಗಳ ಅಂದಾಜು 950 ಕಡತಗಳ ವಿಲೇವಾರಿಗಾಗಿ ರೂ.500.00 ಲಕ್ಷಗಳ ಹೆಚ್ಚಿನ ಅನುದಾನವನ್ನು ಮರು ಹೊಂದಾಣಿಕೆ ಮಾಡಿಕೊಂಡು, ಬಿಡುಗಡೆ ಮಾಡಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (158) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಾರ್ವಜನಿಕ ರಕ್ಷಣೆ ಮತ್ತು ಹಿತದೃಷ್ಟಿಗೆ ಸಂಬಂಧಿಸಿದಂತೆ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನಾಚರಣೆ ಮತ್ತು ಇತರೇ ಕಾರ್ಯಕ್ರಮಗಳಿಗೆ ವಿಪತ್ತು ನಿರ್ವಹಣಾ ಕೇಂದ್ರದಲ್ಲಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆರೋಗ್ಯ ಕೇಂದ್ರಗಳಿಗೆ ವೈದ್ಯರುಗಳನ್ನು ಮತ್ತು ಸಿಬ್ಬಂದಿ ವರ್ಗದವರನ್ನು ನಿಯೋಜಿಸಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುತ್ತಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 109 ಖಾಸಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು, 83 ದೊಡ್ಡ ಪ್ರಮಾಣದ ಆಸ್ಪತ್ರೆಗಳು, 30 ರಕ್ತದಾನ ಬ್ಯಾಂಕ್, 23 ಔಷಧಾಲಯಗಳು, 10 ಮೇಲ್ಪಟ್ಟ ಇತರೆ ಇಲಾಖೆಗಳು ಇಂಡಿಯನ್ ಮಿಲಿಟರಿ ಸಂಸ್ಥೆ, ಇಂಡಿಯನ್ ಏರ್‌ಫೋರ್ಸ್, ಜಿಲ್ಲಾಧಿಕಾರಿಗಳು, ಜಿಲ್ಲಾ ಮ್ಯಾಜಿಸ್ಟ್ರೇಟ್ಸ್, ತಾಲ್ಲೂಕು ತಹಸೀಲ್ದಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಅಗ್ನಿ ಶಾಮಕ ದಳ, ಸಾರಿಗೆ ಇಲಾಖೆ, ಡಬ್ಲ್ಯೂ.ಎಸ್.ಎಸ್.ಬಿ., ಬೆಸ್ಕಾಂ, ಪಿ.ಡಬ್ಲ್ಯೂ.ಡಿ. ಇಂಜಿನಿಯರಿಂಗ್ ಇಲಾಖೆ, 108 ಆಂಬ್ಯುಲೆನ್ಸ್, ಪರಿಸರ ಇಲಾಖೆ, ಹೋಂ ಗಾರ್ಡ್ ಇಲಾಖೆ ಮುಂತಾದವುಗಳ ಸಹಕಾರದಿಂದ ಸೇವೆ ನಿರ್ವಹಿಸಲಾಗುತ್ತಿದೆ.

ಭಾರತದ ಪ್ರಮುಖ ನಗರಗಳಾದ ದೆಹಲಿ, ಬಾಂಬೆ, ಕಲ್ಕತ್ತ, ಗುಜರಾತ್, ಚೆನ್ನೈ, ಬೆಂಗಳೂರು, ಮುಂತಾದ ರಾಜ್ಯಗಳಲ್ಲಿ ಭಯೋತ್ಪಾದಕರ ಮತ್ತು ಉಗ್ರಗಾಮಿಗಳ ದಾಳಿಯಿಂದ ಸಾರ್ವಜನಿಕರು ತೊಂದರೆಯನ್ನು ಅನುಭವಿಸಿರುತ್ತಾರೆ ಹಾಗೂ ಭಯೋತ್ಪಾದಕರ ದಾಳಿಯಿಂದ ಸಾವುನೋವುಗಳು ಸಂಭವಿಸಿರುತ್ತವೆ. ಭಯೋತ್ಪಾದಕರ ದಾಳಿಯಿಂದ ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಅವರ ರಕ್ಷಣೆ ಮಾಡುವ ಬಗ್ಗೆ ಸಮಸ್ಯೆಗಳನ್ನು ನಿಭಾಯಿಸಲು ವಿಪತ್ತು ನಿರ್ವಹಣಾ ಕೇಂದ್ರವನ್ನು ಸ್ಥಾಪಿಸುವುದು ಅಗತ್ಯವಾಗಿರುತ್ತದೆ. ವಿಪತ್ತು ನಿರ್ವಹಣಾ ಕೇಂದ್ರವನ್ನು 8 ವಲಯಗಳಿಗೆ ಹಾಗೂ ಸಂಬಂಧಿಸಿದ ಇಲಾಖೆಗೆ ಸಂಪರ್ಕಿಸಲು ಹಾಗೂ ಒಂದು ಮುಖ್ಯ ವಿಪತ್ತು ನಿರ್ವಹಣಾ ಕೇಂದ್ರವನ್ನು ಪಾಲಿಕೆಯ ಆವರಣದಲ್ಲಿ ಅಥವಾ ಕೇಂದ್ರ ಭಾಗದಲ್ಲಿ ಸ್ಥಾಪಿಸಿ 8 ದಿಕ್ಕುಗಳಲ್ಲಿಯೂ ಮಾಹಿತಿ ಸಂಪರ್ಕ ಪಡೆಯಲು ಒಂದು ಕೇಂದ್ರ ನಿರ್ವಹಣಾ ಕೇಂದ್ರ ಸ್ಥಾನವು ಅವಶ್ಯಕವಾಗಿರುತ್ತವೆ. ವಲಯ ಜಂಟಿ ಆಯುಕ್ತರು ಸದರಿ ಕೇಂದ್ರಗಳ ಆಡಳಿತ ಉಸ್ತುವಾರಿ ಹಾಗೂ ಕಾರ್ಯನಿರ್ವಹಣೆಗೆ ಒಳಪಟ್ಟಿರುತ್ತಾರೆ. ಮುಖ್ಯ ವಿಪತ್ತು ನಿರ್ವಹಣಾ ಕೇಂದ್ರವು ಪಾಲಿಕೆಯ ಆಯುಕ್ತರುರವರ ನಿರ್ವಹಣೆಯಲ್ಲಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಕ್ಕೆ ತರುತ್ತಾ, ಸಾರ್ವಜನಿಕರ ರಕ್ಷಣೆ ಮತ್ತು ಹಿತಾಸಕ್ತಿಯನ್ನು ಕಾಪಾಡಲು ವಿಪತ್ತು ನಿರ್ವಹಣಾ ಕೇಂದ್ರವನ್ನು ಸ್ಥಾಪಿಸಲು ಹಾಗೂ ಕೇಂದ್ರಕ್ಕೆ ಅಗತ್ಯವಾದ ಸಿಬ್ಬಂದಿ, ಸಲಕರಣೆಗಳು ಮತ್ತು 24X7 ಕಾಲ ನಿರ್ವಹಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-05-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಾರ್ವಜನಿಕ ರಕ್ಷಣೆ ಮತ್ತು ಹಿತಾಸಕ್ತಿಯನ್ನು ಕಾಪಾಡಲು ವಿಪತ್ತು ನಿರ್ವಹಣಾ ಕೇಂದ್ರವನ್ನು 08 ವಲಯಗಳಲ್ಲಿ ಸ್ಥಾಪಿಸಲು ಇದರ ಆಡಳಿತ ಉಸ್ತುವಾರಿ ಹಾಗೂ ಕಾರ್ಯನಿರ್ವಹಣೆ ವಲಯ ಜಂಟಿ ಆಯುಕ್ತರುರವರ ಅಧೀನಕ್ಕೆ ಒಳಪಟ್ಟಿರುತ್ತದೆ. 08 ವಲಯಗಳಲ್ಲಿರುವ ವಿವಿಧ ಇಲಾಖೆಗಳನ್ನು

....................2

ಸಂಪರ್ಕಿಸಲು ಪಾಲಿಕೆಯ ಆವರಣದಲ್ಲಿ ಮುಖ್ಯ ವಿಪತ್ತು ನಿರ್ವಹಣಾ ಕೇಂದ್ರವನ್ನು ಸ್ಥಾಪಿಸಿ ಸದರಿ ಕೇಂದ್ರದ ಆಡಳಿತ ಕೆಲಸ ಕಾರ್ಯವು ಮಾನ್ಯ ಆಯುಕ್ತರವರ ಅಧೀನದಲ್ಲಿರುತ್ತದೆ. ವಿಪತ್ತು ನಿರ್ವಹಣಾ ಕೇಂದ್ರ 24X7 ಕಾಲ ನಿರ್ವಹಿಸಬೇಕಾಗಿರುವುದರಿಂದ, ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ಅಗತ್ಯವಾದ ಸಿಬ್ಬಂದಿ ಸಲಕರಣೆಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬಹುದಾಗಿರುತ್ತದೆಂದು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:11-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:11-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:11-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (97) / 2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:85 ರಲ್ಲಿ 100 ವಸತಿ ಗೃಹಗಳಿದ್ದು, ಇವರುಗಳಿಗೆ ಹೆಚ್‌ಯುಡಿ/282/ಎಂಎನ್‌ಜಿ/78, ದಿನಾಂಕ: 15-10-1979 ರ ಸರ್ಕಾರದ ಆದೇಶದಂತೆ 100 ವಸತಿ ಗೃಹಗಳ ಪೈಕಿ 46 ವಸತಿ ಗೃಹದ ಹಂಚಿಕೆದಾರರು ಸರ್ಕಾರವು ನಿಗಧಿಪಡಿಸಿದ ಕ್ರಯದ ಮೊಬಲಗನ್ನು ಪಾವತಿಸಿ ಕ್ರಯ ಪಡೆದಿದ್ದು, ಉಳಿದ 54 ಜನ ಹಂಚಿಕೆದಾರರಿಗೆ 1 ವರ್ಷ ಕಾಲಾವಕಾಶ ನೀಡಿದ್ದರೂ ಕ್ರಯಕ್ಕೆ ಪಡೆದಿರುವುದಿಲ್ಲ.

ಇದೇ ರೀತಿಯ ಮತ್ತೊಂದು ಪ್ರಕರಣದಲ್ಲಿ ಸಂಖ್ಯೆ:ನಅಇ/40/ಎಂಎನ್‌ಜಿ/2002, ದಿನಾಂಕ: 20-05-2006ರ ಆದೇಶದಲ್ಲಿ ಮರ್ಫಿಟೌನ್ ವ್ಯಾಪ್ತಿಯಲ್ಲಿನ 466 ವಸತಿ ಗೃಹಗಳ ಪೈಕಿ 344 ಜನ ಫಲಾನುಭವಿಗಳಿಗೆ ಕಾಲ ವಿಸ್ತರಣೆ ಆದೇಶ ಅನ್ವಯಿಸಿದ ಆದೇಶ ಮುಕ್ತಾಯಗೊಂಡು, ಮುಂದುವರೆದ ಅವಧಿಗೆ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ವಿಧಿಸಲಾಗುವ ರೀತ್ಯಾ 1ನೇ ವರ್ಷಕ್ಕೆ ಶೇ.9% ರಷ್ಟು, ಮುಂದುವರೆದ ವರ್ಷಕ್ಕೆ ಶೇ. 15% ರಷ್ಟು ಮೂಲ ಕ್ರಯದ ಹಣದ ಮೇಲೆ ಬಡ್ಡಿ ವಿಧಿಸಿ, ಸದರಿ ಮೊತ್ತವನ್ನು ಪಾವತಿಸಲು 60 ದಿವಸಗಳ ಕಾಲಾವಕಾಶ ಕಲ್ಪಿಸಲಾಗಿದ್ದು, ಇದೇ ರೀತಿಯಲ್ಲಿ ತಮಗೂ ಅಧಿಕೃತ ಕ್ರಯ ಪತ್ರ ನೀಡಬೇಕೆಂದು ಕೋರಿರುವ ಮನವಿಯ ಬಗ್ಗೆ ಅಪರ ಆಯುಕ್ತರು (ಪೂರ್ವ) ರವರು ಮಾನವೀಯ ದೃಷ್ಟಿಯಿಂದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಆದೇಶ ಪಡೆದು ವಸತಿ ಗೃಹಗಳನ್ನು ಹಂಚಿಕೆ ಮಾಡಬಹುದೆಂದು ಶಿಫಾರಸ್ಸು ಮಾಡಿದ್ದು, 90 ದಿವಸಗಳ ಕಾಲಾವಕಾಶ ಕಲ್ಪಿಸಿ, ಸರ್ಕಾರದ ಅನುಮೋದನೆ ಪಡೆದು ಕಳುಹಿಸುವಂತೆ ದಿನಾಂಕ:17-11-2009 ರಲ್ಲಿ ಸರ್ಕಾರವನ್ನು ಕೋರಲಾಗಿತ್ತು.

ಈ ಮೇರೆಗೆ ಸರ್ಕಾರವು ದಿನಾಂಕ:12-03-2010 ರ ಪತ್ರದಲ್ಲಿ ದಿನಾಂಕ:17-11-2009 ರ ಪ್ರಸ್ತಾವನೆಯನ್ನು ಪರಿಶೀಲಿಸಲು, ಪ್ರಸ್ತಾವನೆಗೆ ಈ ಹಿಂದೆ ಆಡಳಿತಗಾರರ ನಿರ್ಣಯವಾಗಿರುವ ಪ್ರತಿ 100 ಫಲಾನುಭವಿಗಳ ಪೈಕಿ ಉಳಿದ 54 ಫಲಾನುಭವಿಗಳ ವಿವರ, 54 ಜನ ಹಂಚಿಕೆದಾರರು ಕ್ರಯಕ್ಕೆ ಪಡೆಯದೇ ಇರುವುದಕ್ಕೆ ಕಾರಣಗಳು, ಫಲಾನುಭವಿಗಳಿಗೆ ಹಂಚಿಕೆ ಮಾಡಿರುವ ವಸತಿ ಗೃಹದ ವಿವರಗಳು ಮತ್ತು ಅಳತೆ ವಿವರಗಳನ್ನು ಒದಗಿಸಲು ನಿರ್ದೇಶನ ನೀಡಿದ್ದು, ಈ ಮೇರೆಗೆ ಸರ್ಕಾರವು ಕೋರಿರುವ ಅಂಶಗಳಿಗೆ ಮಾಹಿತಿ ಮತ್ತು ದಾಖಲಾತಿಗಳನ್ನು ಲಗತ್ತಿಸಿ ಸರ್ಕಾರದ ಅನುಮೋದನೆ ಕೋರಲಾಗಿತ್ತು.

ದಿನಾಂಕ:29-03-2010ರ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿ ಮುಂದೆ ಮಂಡಿಸಲು ಸೂಚಿಸಿದ್ದು, ಈ ಮೇರೆಗೆ ಸಲಹಾ ಸಮಿತಿ ಮುಂದೆ ಮಂಡಿಸಿ ಸಲಹಾ ಸಮಿತಿ ಸಭೆಯಲ್ಲಿ ಇವರುಗಳು ಕೊಡಬೇಕಾಗಿರುವ ಮೊತ್ತವನ್ನು 22.75% ಅನುದಾನದಿಂದ ಭರಿಸಿ ಕ್ರಯಪತ್ರಗಳನ್ನು ಮಾಡಿಕೊಡುವಂತೆ ನಿರ್ಣಯಿಸಲಾಗಿರುತ್ತದೆ.

ಆದರೆ, ಸರ್ಕಾರವು ಸಂಖ್ಯೆ: ನಅಇ 115 ಎಂಎನ್‌ಜಿ 2008, ದಿನಾಂಕ:21-02-2011 ರಂದು ಪತ್ರ ಬರೆದು 54 ಜನ ಹಂಚಿಕೆದಾರರಿಗೆ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ವಿಧಿಸಲಾಗುವ ಕಾಲ ವಿಸ್ತರಣೆ ಆದೇಶ ಅನ್ವಯಿಸಿ ಕ್ರಯ ಪತ್ರ ನೀಡುವ ಪ್ರಸ್ತಾವನೆಗೆ ಪಾಲಿಕೆ ಸಭೆಯಲ್ಲಿ ನಿರ್ಣಯವಾಗಿಲ್ಲವೆಂದು ಪಾಲಿಕೆಯ ನಿರ್ಣಯದೊಂದಿಗೆ ಮರು ಮಂಡಿಸಲು ನಿರ್ದೇಶನ ನೀಡಿರುತ್ತದೆ.

ಆದ್ದರಿಂದ, ವಾರ್ಡ್ 85, ಸರ್ವಜ್ಞನಗರ ಪೌರ ಕಾರ್ಮಿಕರ ಕಾಲೋನಿಯಲ್ಲಿ 100 ವಸತಿ ಗೃಹಗಳಲ್ಲಿ ವಾಸವಾಗಿರುವ 100 ವಸತಿ ಗೃಹಗಳ ಪೈಕಿ ಕ್ರಯದ ಮೊತ್ತವನ್ನು ಪಾವತಿಸದ 54 ಜನ ಹಂಚಿಕೆದಾರರಿಗೆ ಅವರು ಕೊಡಬೇಕಾಗಿರುವ ಮೊತ್ತವನ್ನು 22.75% ಅನುದಾನದಿಂದ ಭರಿಸಿ ಕ್ರಯ ಪತ್ರಗಳನ್ನು ಮಾಡಿಕೊಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ

ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 16-03-2011ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2011ರ ನಿರ್ಣಯ ಹಾಗೂ ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:18(97)/2011-12 ರಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಕೌನ್ಸಿಲ್ ಸಭೆಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ಪಾಲಿಕೆ ಸಭೆಯ ನಿರ್ಣಯ ಹಾಗೂ ದಿನಾಂಕ:28-07-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯವನ್ನು ಪರಿಶೀಲಿಸಿದ್ದು, ದಿನಾಂಕ:20-06-2011ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:17-09-2011ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 11 (160) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಭಾರತಿ ಸೇವಾ ಸಂಘ ಕಾರ್ಯದರ್ಶಿರವರಿಗೆ ಬಸವರಾಜ ಗಲ್ಲಿಯಲ್ಲಿ 10+16x30/2=390 ಚದರ ಅಡಿಗಳ ನಗರ ಪಾಲಿಕೆ ಜಾಗದ ಗುತ್ತಿಗೆಯನ್ನು ಮಾಸಿಕ ರೂ.1/-ರಂತೆ 25-ವರ್ಷಗಳಿಗೆ ದಿನಾಂಕ:03-10-1960 ರಲ್ಲಿ ಶಾಲೆ ನಡೆಸುವ ಸಲುವಾಗಿ ಗುತ್ತಿಗೆ ನೀಡಲಾಗಿತ್ತು. ಸದರಿ ಸಂಸ್ಥೆಯರವರು 1991ರ ಜನವರಿ ಯಿಂದ ಸೆಪ್ಟೆಂಬರ್ 2011ರವರೆವಿಗೆ ಒಟ್ಟು ರೂ 249/- ಗಳನ್ನು ಬಾಕಿ ಇರುವ ಗುತ್ತಿಗೆ ಮೊತ್ತವನ್ನು ದಿನಾಂಕ:19-10-2011 ರಲ್ಲಿ ಪಾಲಿಕೆಗೆ ಪಾವತಿಸಿರುತ್ತಾರೆ. ಸದರಿ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸಿಕೊಡುವಂತೆ ದಿನಾಂಕ:12-12-2011 ರಲ್ಲಿ ಮನವಿ ನೀಡಿರುತ್ತಾರೆ.

ದಿನಾಂಕ:27-05-2011 ರಂದು ಸಹ ಕಂದಾಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಗಿದ್ದು, ಈ ಸೇವಾ ಸಂಘವು ತಮ್ಮದೇ ಆದ ಜಾಗದಲ್ಲಿ ಶಾಲೆ ನಡೆಸುತ್ತಿದ್ದು, ಪಾಲಿಕೆಯ ಗುತ್ತಿಗೆ ಜಾಗವು ಅದರ ಜಾಗಕ್ಕೆ ಲಗತ್ತಾಗಿದ್ದು, ಹೆಚ್ಚುವರಿಯಾಗಿ ಕಟ್ಟಡ ನಿರ್ಮಿಸಿ ಉಪಯೋಗಿಸುತ್ತಿರುತ್ತಾರೆ.

ಸ್ಥಳೀಯರನ್ನು ವಿಚಾರಿಸಿದಾಗ ಈ ಶಾಲೆಯಿಂದ ಸ್ಥಳೀಯ ಬಡ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತಿದೆ ಎಂದು ಅಭಿಪ್ರಾಯಿಸಿರುತ್ತಾರೆ. ಆದುದರಿಂದ, ಈಗಿನ ಸರ್ಕಾರಿ ಮಾರ್ಗಸೂಚಿ ದರದಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ರಿಯಾಯಿತಿ ದರದೊಂದಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಬಹುದಾಗಿರುತ್ತದೆ.

ಪ್ರಸ್ತುತ ಜಾಗದ ವಿಸ್ತೀರ್ಣವು 10+16x30/2=390 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ:21.09.2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ. 1,700/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 1700x390=ರೂ.6,63,000/- ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.66,300/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.5,525/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಭಾರತಿ ಸೇವಾ ಸಂಘರವರಿಗೆ ಪ್ರಸ್ತಾಪಿತ ಜಾಗದ ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05-03-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪುತ್ತಾ, ದಿನಾಂಕ:01-10-2011 ರಿಂದ ಮಾಸಿಕ ಗುತ್ತಿಗೆ ಮೊತ್ತ ರೂ.5,525/- (ಐದು ಸಾವಿರದ ಐದು ನೂರ ಇಪ್ಪತ್ತೈದು ಮಾತ್ರ) ಗಳನ್ನು ನಿಗಧಿಪಡಿಸಿ 5 (ಐದು) ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ16-07-2012ರ ನಿರ್ಣಯ.

..................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯಲ್ಲಿ ವಾರ್ಡ್ ವಿವರಗಳನ್ನು ಅಳವಡಿಸಿ ಮರುಮಂಡಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತಾವನೆಯಲ್ಲಿ ವಾರ್ಡ್ ವಿವರಗಳನ್ನು ಅಳವಡಿಸಿ ಮರುಮಂಡಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (162) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ದಿನಾಂಕ:09-07-2010 ರಂದು ಟಿಪ್ಪಣಿ ಮುಖೇನ ಕೋರಿದ್ದರ ಮೇರೆಗೆ, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಕಛೇರಿ ಆದೇಶದ ಸಂಖ್ಯೆ:ಸಆ(ಆಸ್ತಿ)ಜೆಎಲ್‌ಸಿ/16/10-11, ದಿನಾಂಕ:28-07-2010 ರಲ್ಲಿ ನಗರ ಪಾಲಿಕೆಯ ಆಸ್ತಿಗಳ ಗುತ್ತಿಗೆ ಅವಧಿ ಮುಗಿದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಏಪ್ರಿಲ್ 2011 ರಲ್ಲಿ ತನ್ನ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯಲ್ಲಿ ಮಾಡಲಾಗಿರುವ ಶಿಫಾರಸ್ಸುಗಳಿಗೆ ಅನುಗುಣವಾಗಿ ಈವರೆವಿಗೆ ನಗರ ಪಾಲಿಕೆಯು ತೆಗೆದುಕೊಂಡ ಕ್ರಮದ ಬಗ್ಗೆ ವರದಿ.

| | ಶಿಫಾರಸ್ಸುಗಳು | ಈವರೆವಿಗೆ ಕ್ರಮ ತೆಗೆದುಕೊಂಡಿರುವ ಬಗ್ಗೆ ವಿವರ |
|---|---|---|
| 1 | ಗುತ್ತಿಗೆ ನೀಡಲಾಗಿರುವ ಎಲ್ಲಾ ಪ್ರಕರಣಗಳಲ್ಲಿ ಸ್ಥಳ ಪರಿಶೀಲಿಸಿ ಷರತ್ತು ಉಲ್ಲಂಘಿಸಿರುವ ಗುತ್ತಿಗೆಗಳನ್ನು ರದ್ದುಪಡಿಸುವುದು | ನಗರ ಪಾಲಿಕೆ ವತಿಯಿಂದ ಗುತ್ತಿಗೆಗೆ ನೀಡಲಾಗಿರುವ ಆಸ್ತಿಗಳನ್ನು ಕಾಲಕಾಲಕ್ಕೆ ಸ್ಥಳ ತನಿಖೆ ನಡೆಸಲಾಗುತ್ತಿದ್ದು, ಗುತ್ತಿಗೆ ಷರತ್ತು ಉಲ್ಲಂಘಿಸಿರುವ ಪ್ರಕರಣಗಳನ್ನು ಪತ್ತೆಹಚ್ಚಿ ಗುತ್ತಿಗೆ ರದ್ದುಪಡಿಸಲು ಅವಶ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಬಗ್ಗೆ ವಲಯಾಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಗಿರುತ್ತದೆ. ಗುತ್ತಿಗೆ ಷರತ್ತು ಉಲ್ಲಂಘಿಸಿರುವ ಪ್ರಕರಣಗಳಲ್ಲಿ ಕೆಪಿಪಿ ಕಾಯ್ದೆ ಕಲಂ 4 ಮತ್ತು 5ರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈವರೆವಿಗೆ ಪಶ್ಚಿಮ ವಲಯದ 17, ದಕ್ಷಿಣ ವಲಯದ 10 ಮತ್ತು ಪೂರ್ವ ವಲಯದ 16, ಹೀಗೆ ಒಟ್ಟು ಗುತ್ತಿಗೆಗೆ ನೀಡಿದ 43 ಆಸ್ತಿಗಳನ್ನು ನಗರ ಪಾಲಿಕೆಗೆ ಹಿಂದಕ್ಕೆ ಪಡೆಯಲು ಆದೇಶ ನೀಡಲಾಗಿದೆ. ಇದರ ಅಂದಾಜು ಮೌಲ್ಯ ರೂ.74,64,92,410/- ಗಳಾಗುತ್ತದೆ. |
| 2 | ಗುತ್ತಿಗೆ ನವೀಕರಿಸುವ ಪ್ರಕರಣಗಳಲ್ಲಿ ಗರಿಷ್ಠ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಪಾಲಿಕೆಗೆ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸುವುದು ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ನಡೆಸಲು ನೀಡಲಾಗಿರುವ ಗುತ್ತಿಗೆ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ನೀಡಲಾಗುವ ಗುತ್ತಿಗೆಗಳಿಗೆ ರಿಯಾಯಿತಿ ದರವನ್ನು ನಿಗಧಿಪಡಿಸುವುದು. | ಸರ್ಕಾರವು ತನ್ನ ಆದೇಶ ಸಂಖ್ಯೆ:ಸಿಎಸಿ/ಬಿಯುಡಿ/5/2006-07, ದಿನಾಂಕ:17-04-2007 ರಲ್ಲಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿಗಳು ಮತ್ತು ಕಟ್ಟಡಗಳ ಅಂದಾಜು ಮಾರುಕಟ್ಟೆ ದರ ಪರಿಷ್ಕರಣೆ ಮಾಡಿರುತ್ತದೆ. ಇದನ್ನು ಅನುಸರಿಸಿ ನಗರ ಪಾಲಿಕೆಯ ಆಸ್ತಿಯನ್ನು ನವೀಕರಿಸುವ / ಕ್ರಯಕ್ಕೆ ನೀಡುವ ಪ್ರಕರಣಗಳಲ್ಲಿ ಗುತ್ತಿಗೆ ದರ / ಮಾರಾಟ ಮೌಲ್ಯ ನಿರ್ಧರಿಸಲಾಗುತ್ತಿದೆ. ಇದರಿಂದ ನಗರ ಪಾಲಿಕೆಯ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಲಾಗುತ್ತಿದೆ. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕವಾಗಿ ಹಿಂದುಳಿದಿರುವ ಸಂಸ್ಥೆಗಳಿಗೆ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಗುತ್ತಿಗೆ ನೀಡಲಾಗುವ ಪ್ರಕರಣಗಳಲ್ಲಿ ನಗರ ಪಾಲಿಕೆಯ ದಿನಾಂಕ:01-03-2002ರ ಸುತ್ತೋಲೆಯಂತೆ ಸದರಿ ಸಂಘ ಸಂಸ್ಥೆಗಳ ಅರ್ಹತೆಯನ್ನು ಆಧರಿಸಿ ರಿಯಾಯಿತಿಯಲ್ಲಿ ಗುತ್ತಿಗೆ ದರ ನಿಗಧಿಪಡಿಸಲಾಗುತ್ತಿದೆ. |

....................2

| | | |
|---|---|---|
| 3 | ಹೊಸದಾಗಿ ಗುತ್ತಿಗೆ ನೀಡುವುದನ್ನು ಪ್ರೋತ್ಸಾಹಿಸುವುದು ಸಮಂಜಸವಲ್ಲ. ಅವಶ್ಯಕವಾಗಿ ನೀಡಬೇಕಾದಂತಹ ಸನ್ನಿವೇಶಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರ ಹಾಗೂ ಅದರ ಸ್ವಾಮ್ಯಕ್ಕೆ ಒಳಪಡುವ ಸಂಸ್ಥೆಗೆ ಮಾತ್ರ ನೇರವಾಗಿ ನೀಡಲು ಪರಿಗಣಿಸಬಹುದಾಗಿದೆ. | ಅತಿ ಅವಶ್ಯಕವಾಗಿ ಪಾಲಿಕೆಯ ಆಸ್ತಿಯನ್ನು ಗುತ್ತಿಗೆಗೆ ನೀಡಲೇಬೇಕಾದ ಸಂದರ್ಭದಲ್ಲಿ ಮಾತ್ರ ಮೇಲೆ ತಿಳಿಸಿದ ಸರ್ಕಾರದ ಮಾರ್ಗಸೂಚಿ ದರಗಳ ಅನ್ವಯ ಗುತ್ತಿಗೆ ದರ ನಿಗಧಿಪಡಿಸಿ ಗುತ್ತಿಗೆ ನವೀಕರಿಸಲಾಗುತ್ತಿದೆ. ಇದರಲ್ಲಿ ಕೇಂದ್ರ / ರಾಜ್ಯ ಸರ್ಕಾರ ಹಾಗೂ ಇದರ ಅಧೀನ ಇಲಾಖೆ / ಸಂಸ್ಥೆಗಳು, ಸಾರ್ವಜನಿಕ ಸೇವಾ ಸಂಸ್ಥೆಗಳು ಹಾಗೂ ಅಂಗವಿಕಲರ ಪ್ರಕರಣಗಳಲ್ಲಿ ಆದ್ಯತೆ ನೀಡಲಾಗುತ್ತಿದೆ. ಅರ್ಹ ಪ್ರಕರಣಗಳನ್ನು ಮಾತ್ರ ಪರಿಗಣಿಸಲಾಗುತ್ತಿದೆ. 2010-11ನೇ ಸಾಲಿನಲ್ಲಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಅನುಮೋದನೆಯೊಂದಿಗೆ ನೀಡಲಾಗಿರುವ ಹೊಸ ಗುತ್ತಿಗೆಯ ವಿವರಗಳು ಕಡತದಲ್ಲಿರುತ್ತದೆ. |
| 4 | ನಗರದಲ್ಲಿ ಇರುವ ಹಸಿರು ಪ್ರದೇಶಗಳು, ರಸ್ತೆಗಳ ಮಧ್ಯದಲ್ಲಿರುವ ಹಸಿರು ಪ್ರದೇಶಗಳು, ಉದ್ಯಾನವನ, ಆಟದ ಮೈದಾನ ಮತ್ತು ಪಾದಚಾರಿ ರಸ್ತೆಗಳಲ್ಲಿ ವಾಣಿಜ್ಯ ಉದ್ದೇಶಗಳಿಗೆ ಗುತ್ತಿಗೆ ನೀಡುವುದನ್ನು ಪಾಲಿಕೆಯ ನೀತಿ ಎಂಬುದಾಗಿ ಪ್ರತಿಬಂಧಿಸಬೇಕು. | ಈಗಾಗಲೇ ಸರ್ಕಾರ ಅಧಿಸೂಚನೆ ಸಂಖ್ಯೆ:ಯುಡಿಡಿ/351/ ಎಂಎನ್‌ಯು/2004, ದಿನಾಂಕ:15-04-2011 ರಂತೆ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳು (786), ಆಟದ ಮೈದಾನಗಳು (149) ಖಾಲಿ ಜಾಗಗಳು (131) ಹೀಗೆ ಒಟ್ಟು 1066 ಆಸ್ತಿಗಳು ಕರ್ನಾಟಕ ಉದ್ಯಾನವನಗಳು, ಆಟದ ಮೈದಾನ ಮತ್ತು ಖಾಲಿ ಜಾಗಗಳು (ಪಿ ಮತ್ತು ಆರ್) ಕಾಯ್ದೆ 1984 ರ ಅಡಿಯಲ್ಲಿ ಸರ್ಕಾರದಿಂದ ಅನುಮೋದಿತವಾಗಿದ್ದು, ರಾಜ್ಯ ಪತ್ರದಲ್ಲಿ ದಿನಾಂಕ:28-04-2011 ರಲ್ಲಿ ಪ್ರಕಟವಾಗಿರುತ್ತದೆ. ಇವುಗಳ ರಕ್ಷಣೆಗೆ ಅವಶ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇಂತಹ ಪ್ರದೇಶದಲ್ಲಿ ಗುತ್ತಿಗೆ ನೀಡುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಿದ್ದು, ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ವಲಯಾಧಿಕಾರಿಗಳಿಗೆ ಸೂಚಿಸಿ ಅವಶ್ಯ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. |
| 5 | 2007ನೇ ಸಾಲಿನಲ್ಲಿ ಗುತ್ತಿಗೆಗೆ ಸಂಬಂಧಿಸಿದಂತೆ ಕರಡು ನಿಯಮಗಳನ್ನು ರಚಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಿದ್ದು, ಈವರೆವಿಗೂ ಅನುಮೋದನೆ ಆಗಿರುವುದಿಲ್ಲ. ಈ ನಿಯಮಗಳ ಅನುಮೋದನೆ ಪಡೆಯುವುದು. | 2007ನೇ ಸಾಲಿನಲ್ಲಿ ಸಲ್ಲಿಸಲಾದ ಕರಡು ನಿಯಮಗಳಿಗೆ ಸರ್ಕಾರವು ತನ್ನ ಪತ್ರ ದಿನಾಂಕ:07-06-2011ರಲ್ಲಿ ಕರಡು ನಿಯಮಗಳನ್ನು ಮರು ಪರಿಶೀಲಿಸಿ ಪಾಲಿಕೆಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದ್ದರ ಮೇರೆಗೆ ದಿನಾಂಕ:04-08-2011ರ ಅಧಿಕೃತ ಜ್ಞಾಪನಾ ಪತ್ರದಲ್ಲಿ ವಿಶೇಷ ಆಯುಕ್ತರು (ಯೋಜನೆ) ಅಧ್ಯಕ್ಷತೆಯಲ್ಲಿ ಪರಿಪೂರ್ಣವಾದ ನಿಯಮಗಳ ರಚನೆಗೆ ಸಮಿತಿ ರಚಿಸಲಾಗಿರುತ್ತದೆ. ಕರಡು ನಿಯಮಗಳನ್ನು ಪಾಲಿಕೆಗೆ ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ. |
| 6 | ಗುತ್ತಿಗೆಗೆ ನೀಡದೆ ಇರುವಂತಹ ಪಾಲಿಕೆಯ ಆಸ್ತಿಗಳಿಗೆ ತಂತಿ ಬೇಲಿ ಹಾಕಿ ಸಂರಕ್ಷಿಸಿ ಆಯವ್ಯಯದಲ್ಲಿ ಲಭ್ಯವಿರುವ ಅನುದಾನ ಬಳಸಿ ಪಾಲಿಕೆಯ ಆಸ್ತಿ ಎಂದು ನಾಮಫಲಕವನ್ನು ಕಡ್ಡಾಯವಾಗಿ ಹಾಕುವುದು. | ಗುತ್ತಿಗೆಗೆ ನೀಡಿರುವ ಹಾಗೂ ನೀಡದೇ ಇರುವಂತಹ ಆಸ್ತಿಗಳನ್ನು ಗುರುತಿಸಿ ಅವುಗಳನ್ನು ರಕ್ಷಿಸಲು ಹಾಗೂ ಸಾರ್ವಜನಿಕರ ಗಮನಕ್ಕೆ ತರಲು ಅಂತಹ ಜಾಗಗಳಿಗೆ ತಂತಿಬೇಲಿ ಹಾಕಿಸಿ "ನಗರ ಪಾಲಿಕೆ ಆಸ್ತಿ" ಎಂಬ ನಾಮಫಲಕವನ್ನು ಹಾಕಿಸಲಾಗುತ್ತಿದೆ. ಈ ಬಗ್ಗೆ ವಲಯಾಧಿಕಾರಿಗಳಿಗೆ ಸುತ್ತೋಲೆ ಮುಖಾಂತರ ಸೂಚನೆ ನೀಡಲಾಗಿರುತ್ತದೆ. |

...................3

| | | |
|---|---|---|
| 7 | ಪಾಲಿಕೆಯ ಸಹ ಕಂದಾಯ ಅಧಿಕಾರಿಗಳ ಕಛೇರಿಗಳಲ್ಲಿ ಪಾಲಿಕೆಯ ಆಸ್ತಿಗಳಿಗೆ ಸಂಬಂಧಿಸಿದಂತೆ ಹಾಗೂ ಗುತ್ತಿಗೆ ನೀಡಲಾಗಿರುವಂತಹ ಆಸ್ತಿಗಳ ಸಂಪೂರ್ಣ ವಿವರಗಳನ್ನು ನಾಮಫಲಕ ಅಥವಾ ಪ್ರಮುಖ ಗೋಡೆ ಮೇಲೆ ಸಾರ್ವಜನಿಕರ ಮಾಹಿತಿಗಾಗಿ ಬರೆಸುವುದು. | ನಗರ ಪಾಲಿಕೆಯ ಎಲ್ಲಾ ಸಹ ಕಂದಾಯ ಅಧಿಕಾರಿಗಳ ಕಛೇರಿಯಲ್ಲಿ ಸದರಿ ಕಛೇರಿ ವ್ಯಾಪ್ತಿಯಲ್ಲಿ ಬರುವ ಪಾಲಿಕೆಯ ಆಸ್ತಿಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ವಿವರಗಳು ಲಭ್ಯವಿರುವಂತೆ ಮಾಹಿತಿಯ ನಾಮಫಲಕ ಹಾಕಲು ಅಥವಾ ಪ್ರಮುಖ ಗೋಡೆ ಮೇಲೆ ಬರೆಸಲು ಕ್ರಮ ತೆಗೆದುಕೊಳ್ಳಲಾಗಿರುತ್ತದೆ. ಈ ಬಗ್ಗೆ ವಲಯಾಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಗಿರುತ್ತದೆ. |
| 8 | ಪಾಲಿಕೆಯ ಆಸ್ತಿಗಳ ಸಂರಕ್ಷಣೆಗೆ ಸ್ಥಳೀಯ ಅಭಿಯಂತರರು ಮತ್ತು ಸಹ ಕಂದಾಯ ಅಧಿಕಾರಿಯವರಿಗೆ ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡುವುದು. ಈ ಆಸ್ತಿಗಳ ಅನಧಿಕೃತ ಒತ್ತುವರಿ ಅಥವಾ ಹಾನಿಗೆ ಒಳಗಾದಲ್ಲಿ ಇವರ ಕರ್ತವ್ಯಚ್ಯುತಿಯೆಂದು ಪರಿಗಣಿಸಿ ನಿಯಮಾನುಸಾರ ಅವರ ವಿರುದ್ಧ ಕ್ರಮ ಜರುಗಿಸುವುದು. | ನಗರ ಪಾಲಿಕೆಯ ಯಾವುದೇ ಆಸ್ತಿ ಅನಧಿಕೃತ ಒತ್ತುವರಿ ಅಥವಾ ಹಾನಿಗೆ ಒಳಗಾದಲ್ಲಿ ಇದಕ್ಕೆ ಸ್ಥಳೀಯ ಅಭಿಯಂತರರು ಮತ್ತು ಸಹ ಕಂದಾಯ ಅಧಿಕಾರಿಗಳೇ ಹೊಣೆಗಾರರಾಗಿರುತ್ತಾರೆ. ಈ ವಿಷಯವನ್ನು ಸದರಿ ಅಧಿಕಾರಿಗಳಿಗೆ ಸುತ್ತೋಲೆ ಮೂಲಕ ಸ್ಪಷ್ಟವಾದ ನಿರ್ದೇಶನಗಳನ್ನು ನೀಡಲಾಗಿರುತ್ತದೆ. |
| 9 | ಗುತ್ತಿಗೆಗೆ ಸಂಬಂಧಿಸಿದ ಪ್ರತಿಯೊಂದು ನಕಲು ಕಡತವನ್ನು ಆಸ್ತಿಶಾಖೆಯಲ್ಲಿ ನಿರ್ವಹಿಸಲು ಕ್ರಮ ಜರುಗಿಸುವುದು. | ಗುತ್ತಿಗೆಗೆ ಸಂಬಂಧಿಸಿದ ಪ್ರತಿಯೊಂದು ಪ್ರಕರಣದ ನಕಲು ದಾಖಲೆ ಇರುವ ಕಡತವನ್ನು ಪಾಲಿಕೆಯ ಆಸ್ತಿ ಶಾಖೆಯಲ್ಲಿ ನಿರ್ವಹಿಸಲು ಕ್ರಮ ತೆಗೆದುಕೊಂಡಿರುತದೆ. |
| 10 | ಪಾಲಿಕೆಯ ಆಸ್ತಿಗೆ ಸಂಬಂಧಿಸಿದ ನ್ಯಾಯಾಲಯದಲ್ಲಿ ಇರುವ ಪ್ರಕರಣಗಳನ್ನು ತ್ವರಿತ ಇತ್ಯರ್ಥ ಹಾಗೂ ಸಮರ್ಪಕವಾದ ಮಂಡನೆ ದಾಖಲಾತಿಗಳನ್ನು ಸಲ್ಲಿಸುವಿಕೆಯ ಬಗ್ಗೆ ಕಾನೂನು ಶಾಖೆಯ ಮುಖ್ಯಸ್ಥರು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ನ್ಯಾಯವಾದಿಗಳು, ಸಹಕಂದಾಯ ಅಧಿಕಾರಿಗಳ ಸಭೆಯನ್ನು ಆಯೋಜಿಸಿ ಪರಾಮರ್ಶಿಸುವುದು ಹಾಗೂ ಎಲ್ಲಾ ಪ್ರಕರಣಗಳನ್ನು ದಿನಾಂಕ ಇತ್ಯಾದಿ ಬಗ್ಗೆ ಪ್ರತ್ಯೇಕ ವಹಿಯನ್ನು ಕಾನೂನು ಶಾಖೆಯಲ್ಲಿ ನಿರ್ವಹಿಸುವುದು. | ಈ ವಿಷಯದಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಸಂಪೂರ್ಣ ವಿವರಗಳನ್ನೊಳಗೊಂಡಂತೆ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಕಾನೂನು ಕೋಶದ ಅಧಿಕಾರಿಗಳು ಬಾಕಿ ಪ್ರಕರಣಗಳನ್ನು ಪರಾಮರ್ಶಿಸಬೇಕೆಂದು ಸೂಚಿಸಿ ಸುತ್ತೋಲೆ ನೀಡಲಾಗಿರುತ್ತದೆ. |
| 11 | ಕಂದಾಯ ಹಾಗೂ ಸಹ ಕಂದಾಯ ಅಧಿಕಾರಿಗಳ ಹೆಚ್ಚಿನ ಸಂಖ್ಯೆಯ ಕಛೇರಿಗಳು ಸಣ್ಣ ಸಣ್ಣ ಕಟ್ಟಡಗಳಲ್ಲಿದ್ದು, ಪ್ರತ್ಯೇಕ ಅಭಿಲೇಖಾಲಯಗಳಿಲ್ಲದೆ ದಾಖಲಾತಿಗಳನ್ನು ಅಲ್ಮೇರಾದಲ್ಲಿ ಇಟ್ಟು, ಈ ಅಲ್ಮೇರಾಗಳು ಕಛೇರಿಯಲ್ಲಿ ಓಡಾಡುವ ಮಾರ್ಗದಲ್ಲೆಲ್ಲಾ ಇಡಲಾಗಿರುತ್ತದೆ. ಲಭ್ಯವಿರುವ ಪ್ರದೇಶವನ್ನು ಉಪಯೋಗಿಸಿಕೊಂಡು ಅಥವಾ ಹೆಚ್ಚಿನ ಮಹಡಿಯ ಕಟ್ಟಡಗಳನ್ನು ನಿರ್ಮಿಸಿ ದಾಖಲಾತಿ, ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಅನುಕೂಲಕರ ವಾತಾವರಣ ಕಲ್ಪಿಸುವುದು. | ಪ್ರತಿ ಕಛೇರಿಯಲ್ಲಿ ಲಭ್ಯವಿರುವ ಜಾಗವನ್ನು ಉಪಯೋಗಿಸಿಕೊಂಡು . ಕಡತಗಳನ್ನು / ದಾಖಲಾತಿಗಳನ್ನು ವ್ಯವಸ್ಥಿತ ರೀತಿಯಲ್ಲಿ ಸಂರಕ್ಷಿಸಿ ನಿರ್ವಹಿಸುವಂತೆ ವಲಯಾಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿರುತ್ತದೆ. |

....................4

ಮೇಲೆ ವಿವರಿಸಿದ ವರದಿಯನ್ನು ಗುತ್ತಿಗೆ ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದ ವಿವರಗಳನ್ನು ಹಾಗೂ ಪಾಲಿಕೆಯ ಆಸ್ತಿಯನ್ನು ಗುರುತಿಸಿ ಸರ್ವೆ ಮಾಡಿ ಆಸ್ತಿ ವಹಿಗಳಲ್ಲಿ ದಾಖಲಿಸಿರುವ ಪ್ರಗತಿಯ ವಿವರಗಳ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10-10-2011ರ ಟಿಪ್ಪಣಿ ಹಾಗೂ ಮಾನ್ಯ ಆಯುಕ್ತರ ದಿನಾಂಕ:10-10-2011ರ ಟಿಪ್ಪಣಿಯನ್ನು ಪರಿಶೀಲಿಸಿ, ಶ್ರೀ. ಎನ್.ನಾಗರಾಜ್, ಅಧ್ಯಕ್ಷರು, ಗುತ್ತಿಗೆ ಆಸ್ತಿಗಳ ಸಂರಕ್ಷಣಾ ಸಮಿತಿರವರು ಸೂಚಿಸಿರುವ ಮೇರೆಗೆ, ಇಲ್ಲಿಯವರೆವಿಗೂ ತೆಗೆದುಕೊಂಡಿರುವ ಕ್ರಮಗಳ ಕುರಿತು ಒಪ್ಪುತ್ತಾ, ಇನ್ನು ಬಾಕಿ ಇರುವ ಕೆಲವೊಂದು ಸ್ವತ್ತುಗಳಲ್ಲಿ ಗುತ್ತಿಗೆ ಷರತ್ತನ್ನು ಉಲ್ಲಂಘಿಸಿರುವ, ಗುತ್ತಿಗೆ ಅವಧಿ ಮುಗಿದಿರುವ ಹಾಗೂ ಗುತ್ತಿಗೆ ಅವಧಿಯನ್ನು ನವೀಕರಿಸದೇ ಇರುವ ಸ್ವತ್ತುಗಳನ್ನು ಕೂಡಲೇ ಪಾಲಿಕೆಯ ವಶಕ್ಕೆ ತೆಗೆದುಕೊಂಡು, ಪಾಲಿಕೆಯ ನಾಮಫಲಕವನ್ನು ಹಾಕಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (163) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಪಿ.ಎಲ್.ವಸುಂಧರ ರವರು ಎ.ಎಂ.ಲೇನ್, 1ನೇ ಕ್ರಾಸ್‌ನಲ್ಲಿರುವ ಎಲ್ ಆಕಾರದಲ್ಲಿರುವ 10x6 ಅಡಿಗಳ ಖಾಲಿ ಜಾಗದಲ್ಲಿ ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡಲು ಗುತ್ತಿಗೆಗೆ ನೀಡುವಂತೆ ಕೋರಿ ದಿನಾಂಕ:20-05-2011 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕಾಟನ್‌ಪೇಟೆ) ಉಪ ವಿಭಾಗದವರು ಸ್ಥಳ ಪರಿಶೀಲಿಸಿ, ಸದರಿ ಜಾಗವು ಮೂಲೆ ನಿವೇಶನವಾಗಿದ್ದು ಹಾಗೂ ಬಿವಿಕೆ ಅಯ್ಯಂಗಾರ್ ರಸ್ತೆಗೆ ಅಭಿಮುಖವಾಗಿರುತ್ತದೆ. ಸದರಿ ಜಾಗದಲ್ಲಿರುವ 10x6 ಅಡಿಗಳ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದಾಗಿ ವಲಯಾಧಿಕಾರಿಗಳು ಸಹ ಅನುಮೋದನೆಗಾಗಿ ಕಡತ ಸಲ್ಲಿಸಿರುತ್ತಾರೆ. ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 10x6=60 ಚದರ ಅಡಿಗಳಾಗಿದ್ದು, ಈ ಪ್ರದೇಶದ ದಿನಾಂಕ: 21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರವು ಚದರ ಅಡಿ ಒಂದಕ್ಕೆ ರೂ.7500/- ಗಳಾಗಿದ್ದು, ಇದಕ್ಕೆ ಶೇ 40% ರಷ್ಟು ಹೆಚ್ಚಿಸಿದಾಗ ರೂ.10,500/- ಗಳಾಗುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 10500x60=ರೂ.6,30,000/- ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.63000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.5250/- ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02-06-2003 ರಲ್ಲಿನ ಕ್ರಮ ಸಂಖ್ಯೆ vi) ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂಬುದಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಮೇಲೆ ನಮೂದಿಸಿರುವ ಸ್ಥಳವನ್ನು ಹರಾಜು ಮೂಲಕ ಗುತ್ತಿಗೆ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-04-2012ರ ಟಿಪ್ಪಣಿ ಹಾಗೂ ದಿನಾಂಕ:11-04-2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಿ, ಸದರಿ ಸ್ಥಳವನ್ನು ಹರಾಜು ಮೂಲಕ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:17-04-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತಾವನೆಯಲ್ಲಿ ವಾರ್ಡ್ ವಿವರಗಳನ್ನು ಅಳವಡಿಸಿ ಮರುಮಂಡಿಸುವುದು".

ಶ್ರೀ. ಗಂಗಬೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

...................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತಾವನೆಯಲ್ಲಿ ವಾರ್ಡ್ ವಿವರಗಳನ್ನು ಅಳವಡಿಸಿ ಮರುಮಂಡಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (166) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ ಆಲೇಶ್ ಕಲೆಕ್ಷನ್ಸ್ ಸಂಸ್ಥೆಯವರಿಗೆ ಪಾದಚಾರಿ ರಸ್ತೆಗಳ ಮೇಲೆ 2'x2.5' (2 ಕಡೆ) 500 ಹೂ ಕುಂಡಗಳನ್ನು ಅಳವಡಿಸಿ ಜಾಹೀರಾತು ಪ್ರದರ್ಶಿಸಲು ದಿನಾಂಕ:25-06-2008 ರಂದು ಕರಾರು ಪತ್ರ ಮಾಡಿ ಮೂರು ವರ್ಷಗಳ ಅವಧಿಗೆ ಅನುಮತಿ ನೀಡಲಾಗಿರುತ್ತದೆ.

ಈ ಹೂಕುಂಡಗಳ ಡಿಸೈನ್ ಅನ್ನು ಅನುಮೋದಿಸಿಕೊಳ್ಳದೇ ಪಾದಚಾರಿ ಮಾರ್ಗದಲ್ಲಿ ಕಂಬಗಳನ್ನು ನಿರ್ಮಿಸಿ ಅದರ ಮೇಲೆ ಹೂಕುಂಡಗಳನ್ನು ಹಾಕಿದ್ದುದರಿಂದ ಈ ಬಗ್ಗೆ ವ್ಯಾಪಕ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನಲೆಯಲ್ಲಿ ಪಾಲಿಕೆಯ ಪೂರ್ವ ವಲಯದ ಸಿಬ್ಬಂದಿಯವರು ತೆರವುಗೊಳಿಸಿರುತ್ತಾರೆ. ಇದನ್ನೇ ಏಜೆನ್ಸಿಯವರು ತಮ್ಮ ಸಂಸ್ಥೆಗೆ ಯಾವುದೇ ಮಾಹಿತಿಯನ್ನು ನೀಡದೇ ಹೂಕುಂಡಗಳನ್ನು ತೆರವುಗೊಳಿಸಿರುತ್ತಾರೆ ಎಂದು ದೂರಿರುವುದು ಸರಿಯಲ್ಲ.

ಇದರಿಂದ ತಮ್ಮ ಸಂಸ್ಥೆಗೆ ನಷ್ಟ ಉಂಟಾಗಿದ್ದೂ ಅಲ್ಲದೇ ತಮ್ಮ ಸಂಸ್ಥೆಯ ಹೆಸರಿಗೆ ಧಕ್ಕೆ ಉಂಟಾಗಿದೆ ಎಂಬ ನೆಪ ಹೂಡಿ ಸದರಿ ಸಂಸ್ಥೆಯು ಬದಲಿ ಸ್ಥಳ ನೀಡಲು ಅನುಮತಿ ಕೋರಿ ಎಂ.ಸಿ.ಎ. ಸಂಸ್ಥೆಯಿಂದ ಸಿದ್ಧಪಡಿಸಿರುವ 04 ಡಿಸೈನ್‌ಗಳ ಪೈಕಿ ಯಾವುದಾದರೂ ಒಂದನ್ನು ಅನುಮೋದಿಸಿ ಸುಮಾರು 13 ಸ್ಥಳಗಳಲ್ಲಿ 500 ಹೂ ಕುಂಡಗಳನ್ನು ವಿದ್ಯುತ್ ಕಂಬಗಳ ಮೇಲೆ ಅಳವಡಿಸಲು ಅನುಮತಿ ನೀಡುವಂತೆ ಕೋರಿರುವುದು ಕಂಡುಬಂದಿರುತ್ತದೆ.

ಸದರಿ ಸಂಸ್ಥೆಯವರಿಗೆ ದಿನಾಂಕ:25-06-2008 ರಂದು ಮಾಡಿರುವ ಕರಾರು ಪತ್ರದಲ್ಲಿ ನೀಡಿದ್ದ ರಸ್ತೆಗಳು

| ಕ್ರ ಸಂ. | ಸ್ಥಳಗಳು | ಸಂಖ್ಯೆ |
|---|---|---|
| 1 | ಎಂ.ಜಿ.ರಸ್ತೆ : ಟ್ರಿನಿಟಿ ವೃತ್ತದಿಂದ ಅನಿಲ್ ಕುಂಬ್ಳೆ ವೃತ್ತದವರೆಗೂ | 100 |
| 2 | ರೆಸಿಡೆನ್ಸಿ ರಸ್ತೆ : ಕ್ಯಾಶ್ ಫಾರ್ಮಸಿ ವೃತ್ತದಿಂದ ಮೆಯೋ ಹಾಲ್ ವೃತ್ತದವರೆಗೆ | 100 |
| 3 | ಏರ್‌ಪೋರ್ಟ್ ರಸ್ತೆ : ಏರ್‌ಪೋರ್ಟ್ 1ನೇ ಗೇಟ್ ನಿಂದ ದೊಮ್ಮಲೂರು ಜಂಕ್ಷನ್‌ವರೆಗೆ | 200 |
| 4 | ಸ್ಯಾಂಕಿ ರಸ್ತೆ ಕಾವೇರಿ ಜಂಕ್ಷನ್‌ನಿಂದ ಹೈಗ್ರೌಂಡ್ಸ್ ಪೊಲೀಸ್ ಸ್ಟೇಷನ್‌ವರೆಗೆ | 100 |
| | ಒಟ್ಟು | **500** |

ಈ ಮೇಲ್ಕಂಡ 04 ರಸ್ತೆಗಳ ಬದಲಿಗೆ ಈ ಕೆಳಕಂಡ 13 ರಸ್ತೆಗಳನ್ನು ಬದಲಿಯಾಗಿ ನೀಡಲು ಏಜೆನ್ಸಿಯವರು ಕೋರಿರುತ್ತಾರೆ.

| ಕ್ರ ಸಂ. | ಸ್ಥಳಗಳು | ಸಂಖ್ಯೆ |
|---|---|---|
| 1 | ಎಂ.ಜಿ.ರಸ್ತೆ ಟ್ರಿನಿಟಿ ವೃತ್ತದಿಂದ ಅನಿಲ್ ಕುಂಬ್ಳೆ ರಸ್ತೆಯವರೆಗೆ | 59 |
| 2 | ರೆಸಿಡೆನ್ಸಿ ರಸ್ತೆ ಕ್ಯಾಷ್ ಫಾರ್ಮಸಿ ಜಂಕ್ಷನ್‌ನಿಂದ ಮೇಯೋ ಹಾಲ್ ವೃತ್ತದವರೆಗೆ | 72 |
| 3 | ಸ್ಯಾಂಕಿ ರಸ್ತೆ, ಕಾವೇರಿ ಜಂಕ್ಷನ್‌ನಿಂದ ಹೈಗ್ರೌಂಡ್ಸ್‌ವರೆಗೆ | 49 |
| 4 | ಸೆಂಟ್ ಮಾರ್ಕ್ಸ್ ರಸ್ತೆ, ಕ್ಯಾಷ್ ಫಾರ್ಮಸಿ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗೆ | 48 |
| 5 | ವಿಠಲ್ ಮಲ್ಯ ರಸ್ತೆ ಯು.ಬಿ. ಸರ್ಕಲ್‌ನಿಂದ ಸೆಂಟ್ ಮಾರ್ಕ್ಸ್ ರಸ್ತೆ | 10 |
| 6 | ರಿಚ್‌ಮಂಡ್ ರಸ್ತೆ ಡಿಸೋಜ ವೃತ್ತದಿಂದ ರಿಚ್‌ಮಂಡ್ ವೃತ್ತದವರೆಗೆ | 23 |

......................2

| | | |
|---|---|---|
| 7 | ಇನ್‌ಫೆಂಟ್ರಿ ರಸ್ತೆ, ಉಪ ಪೊಲೀಸ್ ಆಯುಕ್ತರ ಕಛೇರಿಯಿಂದ ಐ.ಎ.ಎಸ್. ಅಸೋಸಿಯೇಷನ್‌ವರೆಗೆ | 10 |
| 8 | ಕಸ್ತೂರ್‌ಬಾ ರಸ್ತೆ ಹಡ್ಸನ್ ವೃತ್ತದಿಂದ ಎಂ.ಜಿ.ರಸ್ತೆ ಸರ್ಕಲ್ | 32 |
| 9 | ಗ್ರಾಂಡ್ ರಸ್ತೆ, ಯು.ಬಿ.ಜಂಕ್ಷನ್‌ನಿಂದ ವಿಠಲ್ ಮಲ್ಯ ಆಸ್ಪತ್ರೆ | 14 |
| 10 | ಕಮಿಸರಿಯೇಟ್ ರಸ್ತೆ ಮೇಯೋಹಾಲ್ ಜಂಕ್ಷನ್‌ನಿಂದ ಗರುಡ ಮಾಲ್‌ದವರೆಗೆ | 10 |
| 11 | ವಿಕ್ಟೋರಿಯಾ ರಸ್ತೆ, ಡಿಸೋಜ ವೃತ್ತದಿಂದ ಏರ್‌ಪೋರ್ಟ್ ಜಂಕ್ಷನ್‌ವರೆಗೆ | 15 |
| 12 | ಮ್ಯುಸಿಯಂ ರಸ್ತೆ, ಶ್ಯುಲೆ ಸರ್ಕಲ್‌ನಿಂದ ಏರ್‌ಪೋರ್ಟ್ ಜಂಕ್ಷನ್ | 16 |
| 13 | ಹೊಸ ವಿಮಾನ ನಿಲ್ದಾಣ ರಸ್ತೆ ಹೆಬ್ಬಾಳ ಮೇಲುಸೇತುವೆಯಿಂದ ಮೇಕ್ರಿ ವೃತ್ತದವರೆಗೆ | 142 |
| | ಒಟ್ಟು | **500** |

ಈ ಮೇಲ್ಕಂಡ ರಸ್ತೆಗಳಲ್ಲಿ ವಿದ್ಯುತ್ ಕಂಬಗಳ ಮೇಲೆ ಹೂ ಕುಂಡಗಳನ್ನು ಅಳವಡಿಸಲು ಬದಲಿ ಸ್ಥಳ ನೀಡಲು ಕೋರಿರುವ ಮೇರೆಗೆ, ಈ ಬಗ್ಗೆ ಸದರಿ ವಿನ್ಯಾಸವನ್ನು ಬದಲಾಯಿಸಲು ಸಾರ್ವಜನಿಕ ಅಭಿಪ್ರಾಯವನ್ನು ಪಡೆಯಲು ಸೂಚಿಸಲಾಗಿತ್ತು. ಸಾರ್ವಜನಿಕರಿಂದ ಬಂದ ಆಕ್ಷೇಪಣೆ ಹಾಗೂ ಅಭಿಪ್ರಾಯಗಳನ್ನು ಪರಿಶೀಲಿಸಲಾಗಿ, ದಿನಾಂಕ:20-12-2008 ರಂದು ಅನುಮತಿ ನೀಡಿ 2'x2.5'x4 ಕಡೆ, 2 ಕಡೆ ವಾಣಿಜ್ಯ ಜಾಹೀರಾತು ಹಾಗೂ ಉಳಿದ 02 ಕಡೆ ಪಾಲಿಕೆಯ ಸಾಮಾಜಿಕ ಸಂದೇಶವನ್ನು ಪ್ರದರ್ಶಿಲು ಅನುಮತಿ ನೀಡಿ, ಈ ಕೆಳಕಂಡ ಸ್ಥಳಗಳನ್ನು ದಿನಾಂಕ:19-02-2009 ರೊಳಗಾಗಿ ಎಲ್ಲಾ ಹೂಕುಂಡಗಳನ್ನು ಅಳವಡಿಸುವಂತೆ ದಿನಾಂಕ:25-06-2008 ರಂದು ಮಾಡಿಕೊಂಡಿರುವ ಕರಾರು ಪತ್ರದಲ್ಲಿ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು ಈ ಕೆಳಕಂಡ ಸ್ಥಳಗಳಿಗೆ ಅನುಮೋದನೆ ನೀಡಲಾಗಿರುತ್ತದೆ.

| ಕ್ರ ಸಂ. | ಸ್ಥಳಗಳು | ಸಂಖ್ಯೆ |
|---|---|---|
| 1 | ಕೆ.ಹೆಚ್.ಬಿ. ರಸ್ತೆ, ಫ್ಲೈ ಓವರ್‌ನಿಂದ ಲಾಲ್‌ಬಾಗ್ ವೃತ್ತದವರೆಗೆ | 20 |
| 2 | ಜಯನಗರ 3ನೇ ಬ್ಲಾಕ್‌ನಿಂದ ಸೌತ್ ಎಂಡ್ ವೃತ್ತದವರೆಗೆ | 19 |
| 3 | ರೆಸಿಡೆನ್ಸಿ ರಸ್ತೆ, ಕ್ಯಾಷ್ ಫಾರ್ಮಸಿ ಜಂಕ್ಷನ್‌ನಿಂದ ಮೇಯೋ ಹಾಲ್ ವೃತ್ತದವರೆಗೆ | 72 |
| 4 | ಸ್ಯಾಂಕಿ ರಸ್ತೆ, ಕಾವೇರಿ ಜಂಕ್ಷನ್‌ನಿಂದ ಹೈಗ್ರೌಂಡ್ಸ್‌ವರೆಗೆ | 69 |
| 5 | ಸೆಂಟ್ ಮಾರ್ಕ್ಸ್ ರಸ್ತೆ, ಕ್ಯಾಷ್ ಫಾರ್ಮಸಿ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗೆ | 48 |
| 6 | ವಿಠಲ್ ಮಲ್ಯ ರಸ್ತೆ, ಯು.ಬಿ. ಸರ್ಕಲ್‌ನಿಂದ ಸೆಂಟ್ ಮಾರ್ಕ್ಸ್ ರಸ್ತೆ | 10 |
| 7 | ರಿಚ್‌ಮಂಡ್ ರಸ್ತೆ ಡಿಸೋಜ ವೃತ್ತದಿಂದ ರಿಚ್‌ಮಂಡ್ ವೃತ್ತದವರೆಗೆ | 23 |
| 8 | ಇನ್‌ಫೆಂಟ್ರಿ ರಸ್ತೆ ಉಪ ಪೊಲೀಸ್ ಆಯುಕ್ತರ ಕಛೇರಿಯಿಂದ ಐ.ಯ.ಎಸ್. ಅಸೋಸಿಯೇಷನ್‌ವರೆಗೆ | 10 |
| 9 | ಕಸ್ತೂರಿಬಾ ರಸ್ತೆ, ಹಡ್ಸನ್ ವೃತ್ತದಿಂದ ಎಂ.ಜಿ.ರಸ್ತೆ ಸರ್ಕಲ್ | 32 |
| 10 | ಗ್ರಾಂಡ್ ರಸ್ತೆ ಯು.ಬಿ. ಜಂಕ್ಷನ್‌ನಿಂದ ವಿಠಲ್ ಮಲ್ಯ ಆಸ್ಪತ್ರೆ | 14 |
| 11 | ಕಮಿಷನರಿಯೇಟ್ ರಸ್ತೆ, ಮೇಯೋಹಾಲ್ ಜಂಕ್ಷನ್‌ನಿಂದ ಗರುಡ ಮಾಲ್‌ವರೆಗೆ | 10 |
| 12 | ವಿಕ್ಟೋರಿಯಾ ರಸ್ತೆ, ಡಿಸೋಜ ವೃತ್ತದಿಂದ ಏರ್‌ಪೋರ್ಟ್ ಜಂಕ್ಷನ್‌ವರೆಗೆ | 15 |
| 13 | ಮ್ಯೂಸಿಯಂ ರಸ್ತೆ, ಶ್ಯುಲ್ ಸರ್ಕಲ್‌ನಿಂದ ಏರ್‌ಪೋರ್ಟ್ ಜಂಕ್ಷನ್ | 16 |
| 14 | ಹೊಸ ವಿಮಾನ ನಿಲ್ದಾಣ ರಸ್ತೆ, ಹೆಬ್ಬಾಳ ಮೇಲು ಸೇತುವೆಯಿಂದ ಮೇಕ್ರಿ ವೃತ್ತದವರೆಗೆ | 142 |
| | ಒಟ್ಟು ಹೂಕುಂಡಗಳು | **500** |

..................3

ಇದರಂತೆ, ಸದರಿ ಸಂಸ್ಥೆಯವರು ಈ 14 ಸ್ಥಳಗಳಲ್ಲಿ 500 ಸಂಖ್ಯೆಯ ವಿದ್ಯುತ್ ಕಂಬಗಳ ಮೇಲೆ ಹೂಕುಂಡಗಳನ್ನು ಅಳವಡಿಸಿರುವುದಕ್ಕೆ ದಿನಾಂಕ:20-02-2009 ರಿಂದ 19-02-2011 ರವರೆಗೆ ಎರಡು ವರ್ಷಗಳ ಅವಧಿಗೆ ಲೈಸನ್ಸ್ ಶುಲ್ಕ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆ ಸೇರಿ ರೂ.17,87,271/- ಗಳನ್ನು ಪಾವತಿಸುವಂತೆ ದಿನಾಂಕ:20-09-2010 ರಂದು ಡಿಮ್ಯಾಂಡ್ ನೋಟೀಸ್ ಜಾರಿ ಮಾಡಲಾಗಿರುತ್ತದೆ.

ದಿನಾಂಕ:20-09-2010 ರಂದು ಈ ಕಛೇರಿಯಿಂದ ನೀಡಿರುವ ಡಿಮ್ಯಾಂಡ್ ನೋಟೀಸ್‌ನ ವಿರುದ್ಧ ಸದರಿ ಸಂಸ್ಥೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ.ಸಂಖ್ಯೆ:32075/2010 ರಂತೆ ದಾವೆ ಹೂಡಿ ತಡೆಯಾಜ್ಞೆ ಪಡೆದಿರುತ್ತಾರೆ.

ಸದರಿ ಸಂಸ್ಥೆಯವರು ಅಳವಡಿಸಿರುವ ಹೂಕುಂಡಗಳನ್ನು ದಿನಾಂಕ:28-02-2011 ರಂದು ಸ್ಥಳ ಪರಿಶೀಲಿಸಲಾಗಿದ್ದು, ಸದರಿ ಸಂಸ್ಥೆಯವರು ಈ ಕೆಳಕಂಡಂತೆ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದು ಕಂಡುಬಂದಿರುತ್ತದೆ.

1. <u>**ಕರಾರಿನ ಕಂಡಿಕೆ 06 ಅನ್ನು ಉಲ್ಲಂಘಿಸಿರುತ್ತಾರೆ.**</u>
   ಕರಾರು ಷರತ್ತು 06ರ ಪ್ರಕಾರ ಇವರಿಗೆ ಹಂಚಿಕೆಯಾದ ಹೂಕುಂಡಗಳ ಅಳತೆ 2x2.5x2 ಕಡೆ ಆದರೆ ಸದರಿ ಸಂಸ್ಥೆಯವರು ಹಾಕಿಕೊಂಡಿರುವುದು 2.5x4x2 ಕಡೆ ಅಳತೆಯ ಹೂಕುಂಡ.
2. <u>**ಕರಾರಿನ ಷರತ್ತು 07 ಅನ್ನು ಉಲ್ಲಂಘಿಸಿರುತ್ತಾರೆ.**</u>
   ಕರಾರಿನ ಷರತ್ತು 7 ರ ಪ್ರಕಾರ ಹೂಕುಂಡಗಳ ಮೇಲೆ ಸಾಮಾಜಿಕ ಹಾಗೂ ಉಪಯುಕ್ತ ಸಂದೇಶಗಳನ್ನು ಹಾಕಬೇಕು ಎಂದಿರುತ್ತದೆ ಆದರೆ, ಇವರು ಯಾವುದೇ ಸಾಮಾಜಿಕ ಸಂದೇಶಗಳನ್ನು ಹಾಕಿರುವುದಿಲ್ಲ.
3. <u>**ಕರಾರು ಷರತ್ತು 8 ಅನ್ನು ಉಲ್ಲಂಘಿಸಿರುತ್ತಾರೆ.**</u>
   ಕರಾರಿನ ಷರತ್ತು 8ರ ಪ್ರಕಾರ ಇವರಿಗೆ ಹಂಚಿಕೆ ಆಗಿರುವ ಹೂಕುಂಡಗಳನ್ನು ಬೇರೆ ಯಾರಿಗೂ ಮರು ಗುತ್ತಿಗೆ ನೀಡಬಾರದೆಂದಿರುತ್ತದೆ.
4. ಅಲ್ಲದೇ ಷರತ್ತಿನ ಸಂಖ್ಯೆ: 12 (ಎ) (ಬಿ) (ಇ) ಗಳಂತೆ ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲ.
5. <u>**ಕರಾರಿನ ಷರತ್ತು (24) ಅನ್ನು ಉಲ್ಲಂಘಿಸಿರುತ್ತಾರೆ.**</u>
   ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಲೋಗೋವನ್ನು ಕನ್ನಡದಲ್ಲಿಯೇ ಆಗಲೀ, ಆಂಗ್ಲಭಾಷೆಯಲ್ಲಿಯೇ ಆಗಲೀ ಹಾಕಿರುವುದಿಲ್ಲ.
6. <u>**ಕರಾರಿನ ಷರತ್ತು (25) (ಬಿ) ಅನ್ನು ಸಹ ಸ್ಪಷ್ಟವಾಗಿ ಉಲ್ಲಂಘಿಸಿರುತ್ತಾರೆ.**</u>
   ಕರಾರಿನ ಪ್ರಕಾರ ಡಿಸೈನ್ ಡಿವಿಯೇಷನ್ ಮಾಡುವಂತಿಲ್ಲ. ಆದರೆ ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಸದರಿ ಸಂಸ್ಥೆಯವರಿಗೆ ಹಂಚಿಕೆ ಮಾಡಿರುವುದು ಹೂಕುಂಡಗಳನ್ನು ಆದರೆ ಇವರು ಅಳವಡಿಸಿರುವುದು ಪೋಲ್ ಕಿಯಾಸ್ಕ್‌ಗಳನ್ನು ಇದನ್ನು ಬದಿಯಲ್ಲಿರುವ ಭಾವಚಿತ್ರಗಳಿಂದ ಗಮನಿಸಬಹುದಾಗಿದೆ. ಪೋಲ್ ಕಿಯಾಸ್ಕ್‌ಗಳೇ ಬೇರೆ ಹೂಕುಂಡಗಳೇ ಬೇರೆ. ಹೂಕುಂಡಗಳನ್ನು ಅಳವಡಿಸಿರುವುದಿಲ್ಲ.

ಹಂಚಿಕೆಯಾಗಿದ್ದ 2'x2.5' ಅಡಿ ಬದಲಿಗೆ 2.5'x4' ಅಡಿ ಅಳತೆಯ ಹೂಕುಂಡಗಳನ್ನು ಅಳವಡಿಸಿರುತ್ತಾರೆ. ಸದರಿ ಸಂಸ್ಥೆಯವರು ಕರಾರು ಪತ್ರವನ್ನು ಸ್ಪಷ್ಟವಾಗಿ ಉಲ್ಲಂಘನೆ ಮಾಡಿರುವುದು ವರದಿಯಿಂದ ಕಂಡುಬಂದಿರುತ್ತದೆ. ಕರಾರು ಪತ್ರ ಉಲ್ಲಂಘನೆ ಮಾಡಿರುವುದರಿಂದ 500 ಹೂಕುಂಡಗಳಿಗೆ ದಂಡ ರೂ.25,00,000/- ಗಳನ್ನು ಪಾವತಿಸುವಂತೆ ಸಹ ನೋಟೀಸ್ ಜಾರಿ ಮಾಡಲಾಗಿರುತ್ತದೆ.

ಕರ್ನಾಟಕದ ಘನ ಉಚ್ಛ ನ್ಯಾಯಾಲಯದ ದಿನಾಂಕ:20-04-2011ರ ನಿರ್ದೇಶನದಲ್ಲಿ ಸದರಿ ಸಂಸ್ಥೆಯವರಿಗೆ ನಗರ ಪಾಲಿಕೆಗೆ ಪಾವತಿಸಬೇಕಾಗಿದ್ದ ಮೊತ್ತದಲ್ಲಿ ಶೇಕಡ 50%ರಷ್ಟು ಪಾವತಿಸುವಂತೆ ಆದೇಶಿಸಿದ್ದು, ಈ ಆದೇಶದ ಮೇರೆಗೆ ಸದರಿ ಸಂಸ್ಥೆಯವರು ದಿನಾಂಕ:07-05-2011 ರಂದು ಈ ಕಛೇರಿಗೆ ಪತ್ರವನ್ನು ಸಲ್ಲಿಸಿ ನ್ಯಾಯಾಲಯದ ಆದೇಶದ ಮೇರೆಗೆ ಜಾಹೀರಾತು ತೆರಿಗೆ ಅರ್ಧದಷ್ಟು ರೂ.8,93,363/- ಗಳನ್ನು ಪಾವತಿಸಿರುತ್ತಾರೆ.

ದಿನಾಂಕ:20-02-2011 ರಿಂದ 19-02-2012 ರವರೆಗೆ ಮೂರನೇ ವರ್ಷದ ಅವಧಿಗೆ ಲೈಸನ್ಸ್ ಶುಲ್ಕ, ಜಾಹೀರಾತು ತೆರಿಗೆ ಮತ್ತು ಸೇವಾ ತೆರಿಗೆ ಸೇರಿ ರೂ.16,79,062/- ಗಳನ್ನು ಪಾವತಿಸುವಂತೆ ದಿನಾಂಕ:24-02-2011 ರಂದು ಡಿಮ್ಯಾಂಡ್ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಈ ಮೊತ್ತವನ್ನು ಹಾಗೂ ರೂ.8,93,363/- ಗಳನ್ನು ಹಾಗೂ ದಂಡ ಶುಲ್ಕ ರೂ.25,00,000/- ಗಳು ಸೇರಿ ರೂ.50,72,425/- ಗಳನ್ನು ಸದರಿ ಸಂಸ್ಥೆಯವರು ಪಾವತಿಸಿರುವುದಿಲ್ಲ.

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಅಧ್ಯಕ್ಷರು ದಿನಾಂಕ:21-06-2011 ರಂದು ಪತ್ರವನ್ನು ಬರೆದು ಮೆ॥ ಆಲೇಶ್ ಕಲೆಕ್ಷನ್ಸ್ ಸಂಸ್ಥೆಯವರಿಗೆ ಹೂ ಕುಂಡಗಳನ್ನು ಅಳವಡಿಸಲು ಅನುಮತಿ ನೀಡಿರುವ ಕಡತವನ್ನು ವಿವರವಾದ ವರದಿಯೊಂದಿಗೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಕೋರಿರುತ್ತಾರೆ.

ಸ್ಥಾಯಿ ಸಮಿತಿಯ ಅಧ್ಯಕ್ಷರ ಪತ್ರದ ಮೇರೆಗೆ ವಿವರವಾದ ಟಿಪ್ಪಣಿಯನ್ನು ಸಿದ್ಧಪಡಿಸಿ, ಸದರಿ ಸಂಸ್ಥೆಯವರಿಗೆ ಮುಂದಿನ ಅವಧಿಗೆ ನವೀಕರಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಬಹುದೆಂದು ತಿಳಿಸಿ ಟಿಪ್ಪಣಿಯೊಂದಿಗೆ ಕಡತವನ್ನು ಕಳುಹಿಸಿಕೊಡಲಾಗಿರುತ್ತದೆ.

ಈ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011 ರಂದು ಸಭೆ ನಡೆಸಿ, ವಿಷಯದ ಸಂಖ್ಯೆ:ನಯೋಅಸ್ಥಾಸ/92/11-12ರ ನಿರ್ಣಯದಲ್ಲಿ ನ್ಯಾಯಾಲಯದ ಆದೇಶದಂತೆ ಜಾಹೀರಾತುದಾರರು ಜಾಹೀರಾತು ತೆರಿಗೆಯನ್ನು ಪಾವತಿಸಿರುತ್ತಾರೆ ಹಾಗೂ ಈಗಾಗಲೇ ಪಾಲಿಕೆಯ ಜಂಟಿ ಆಯುಕ್ತರು (ಜಾಹೀರಾತು) ರವರು ಅನುಮತಿ ನೀಡಿರುವ ಹಿನ್ನಲೆಯಲ್ಲಿ ಅರ್ಜಿದಾರರ ಕೋರಿಕೆಯನ್ನು ಮುಂದಿನ 3 ವರ್ಷಗಳಿಗೆ ಮುಂದುವರೆಸಲು ಹಾಗೂ ಒಟ್ಟು 500 ಕೀಯಾಸ್ಕ್‌ಗಳಲ್ಲಿ (ಲಿಟ್) 445 ಕೀಯಾಸ್ಕ್‌ಗಳನ್ನು ಅಳವಡಿಸಿಕೊಂಡಿರುತ್ತಾರೆ. ಉಳಿದ 55 ಕಿಯಾಸ್ಕ್‌ಗಳಿಗೆ ಟ್ರಿನಿಟಿ ವೃತ್ತದಿಂದ ಬ್ರಿಗೇಡ್ ರೋಡ್ ಜಂಕ್ಷನ್‌ವರೆಗೂ ಅಳವಡಿಸಿಕೊಳ್ಳಬಹುದು ಮತ್ತು ಹಲವಾರು ರಸ್ತೆಗಳಲ್ಲಿ ಎರಡು ಕಡೆ (Back to Back) ಜಾಹೀರಾತು ಪ್ರದರ್ಶಿಸುತ್ತಿದ್ದು, ಅವುಗಳಲ್ಲಿ ಕೆಲ ರಸ್ತೆಗಳು ಏಕಮುಖ ರಸ್ತೆಗಳಾಗಿರುವುದರಿಂದ ಒಂದು ಕಡೆ ಮಾತ್ರ ಜಾಹೀರಾತು ಪ್ರದರ್ಶನವಾಗುತ್ತಿದ್ದು, ಇನ್ನೊಂದು ಕಡೆ ಬೇರೆ ರಸ್ತೆಗಳಲ್ಲಿ ಪ್ರದರ್ಶಿಸಲು ಹಾಗೂ ಹೊಸ ಜಾಹೀರಾತು ಬೈಲಾ ನೀತಿಗೆ ಬದ್ಧರಾಗಿರುವ ಷರತ್ತಿಗೊಳಪಟ್ಟು ಅನುಮತಿ ನೀಡಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

ಅವಧಿ ಮುಗಿದ ಮೇಲೆ ಮುಂದಿನ ವರ್ಷದ ಅವಧಿಗೆ ಅನುಮತಿ ನೀಡಬೇಕಾದರೆ ಕರ್ನಾಟಕ ಪಾರದರ್ಶಕ ಕಾಯ್ದೆ ಅನುಸಾರ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು, ಟೆಂಡರ್‌ನಲ್ಲಿ ಹೆಚ್ಚಿಗೆ ಬಿಡ್ ನಮೂದಿಸಿರುವ ಸಂಸ್ಥೆಗೆ ಅನುಮತಿ ನೀಡಬೇಕಾಗಿರುತ್ತದೆ. ಆದ್ದರಿಂದ ಮೆ॥ ಆಲೇಶ್ ಕಲೆಕ್ಷನ್ಸ್ ಸಂಸ್ಥೆಯವರಿಗೆ ಮುಂದಿನ 3 ವರ್ಷಗಳ ಅವಧಿಗೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:18-10-2011ರ ವಿಷಯ ಸಂಖ್ಯೆ:ನಯೋಅಸ್ಥಾಸ/92/11-12ರ ನಿರ್ಣಯವನ್ನು ಕೆ.ಎಂ.ಸಿ. ಕಾಯ್ದೆ 1976ರ ಕಲಂ 98 ರಂತೆ ರದ್ದುಪಡಿಸುವಂತೆ ದಿನಾಂಕ:06-02-2012 ಮತ್ತು 17-04-2012 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಸರ್ಕಾರದಿಂದ ಇದುವರೆಗೂ ಯಾವುದೇ ಆದೇಶ ಬಂದಿರುವುದಿಲ್ಲ.

ಸದರಿ ಸಂಸ್ಥೆಯವರು ದಿನಾಂಕ:19-06-2012 ರಂದು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ ನಮ್ಮ ಸಂಸ್ಥೆಗೆ ಹಂಚಿಕೆಯಾಗಿದ್ದ ಹೂಕುಂಡಗಳನ್ನು ಮುಂದಿನ ಮೂರು ವರ್ಷಗಳ ಅವಧಿಗೆ ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ತೀರ್ಮಾನಿಸಿದ್ದು ಹಾಗೂ ನಮಗೆ ಹಂಚಿಕೆಯಾಗಿದ್ದ 2.5'x4' ಅಡಿ ಅಳತೆಯ 50 ಸಂಖ್ಯೆ ಹೂ ಕುಂಡಗಳನ್ನು ಅಳವಡಿಸಲು ಅನುಮತಿ ನೀಡಲು ಕೋರಿರುತ್ತಾರೆ.

ಸದರಿ ಸಂಸ್ಥೆಯವರು ದಿನಾಂಕ:19-06-2012 ರ ಪತ್ರದಲ್ಲಿ ತಿಳಿಸಿರುವ 2.5x4 ಅಡಿ ಅಳತೆಯ ಹೂ ಕುಂಡಗಳಿಗೆ ಅನುಮತಿ ನೀಡಿರುವುದಿಲ್ಲ. 2x2.5 (4 ಕಡೆ) ಅಡಿ ಅಳತೆಗೆ ಮಾತ್ರ ಅನುಮತಿ ನೀಡಿದ್ದು ಮತ್ತು 20'x10' ಅಡಿ ಅಳತೆಗೆ ಅನುಮತಿ ನೀಡಲು ಕೋರಿರುವ ಮನವಿಯನ್ನು ಪರಿಶೀಲಿಸಲಾಗಿದ್ದು, 20'x10' ಅಡಿ ಅಳತೆಯು ಕ್ಯಾಂಟಿ ಲಿವರ್ ಮಾದರಿಯಲ್ಲಿರುತ್ತದೆ. ನಗರ ಪಾಲಿಕೆಯ ಜಾಹೀರಾತು ಬೈಲಾ-2006 ಅನ್ನು ಕೆಲವು ತಿದ್ದುಪಡಿಗಳನ್ನು ತಂದಿದ್ದು, ಅದರಲ್ಲಿ ಯಾವುದೇ ಗ್ಯಾಂಟ್ರಿಗಳನ್ನು ಹೊಸದಾಗಿ ನೀಡಬಾರದೆಂದು ಮಾರ್ಪಡಿಸಿ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಮತ್ತು ಯಾವುದೇ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಬೇಕಾದಲ್ಲಿ ಸರ್ಕಾರದ ಆದೇಶದಂತೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರವೇ ಟೆಂಡರ್ ಕರೆದು ಅನುಮತಿ ನೀಡಬೇಕಾಗಿರುತ್ತದೆ. ಆದ್ದರಿಂದ ಸದರಿ ಸಂಸ್ಥೆಯವರು ದಿನಾಂಕ:19-06-2012 ರಂದು ಸಲ್ಲಿಸಿರುವ ಮನವಿಯನ್ನು ತಿರಸ್ಕರಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಅವಗಾಹನೆಗೆ ತರುತ್ತಾ, ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:25-06-2012 ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:25-06-2012ರ ಆಯುಕ್ತರವರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ಸದರಿ ಸಂಸ್ಥೆಯವರು ಉಲ್ಲಂಘಿಸಿರುವ ಷರತ್ತುಗಳನ್ನು ಸರಿಪಡಿಸಿಕೊಳ್ಳುವ ನಿಭಂದನೆಯೊಂದಿಗೆ ಸದರಿಯವರು ಕೇಳಿರುವ ವಿನ್ಯಾಸದ ಜಾಹೀರಾತುಗಳನ್ನು ಅಳವಡಿಸಿಕೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ದಿನಾಂಕ:25-06-2012ರ ಆಯುಕ್ತರವರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ಸದರಿ ಸಂಸ್ಥೆಯವರು ಉಲ್ಲಂಘಿಸಿರುವ ಷರತ್ತುಗಳನ್ನು ಸರಿಪಡಿಸಿಕೊಳ್ಳುವ ನಿಭಂದನೆಯೊಂದಿಗೆ ಸದರಿಯವರು ಕೇಳಿರುವ ವಿನ್ಯಾಸದ ಜಾಹೀರಾತುಗಳನ್ನು ಅಳವಡಿಸಿಕೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

**(ಡಿ. ವೆಂಕಟೇಶ್ ಮೂರ್ತಿ)**
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 25 (171) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ. 129, ಜ್ಞಾನಭಾರತಿ ವ್ಯಾಪ್ತಿಯಲ್ಲಿ ಬರುವ ಗೋವಿಂದರಾಜ ವೃತ್ತದಿಂದ ಮಲ್ಲತ್ತಹಳ್ಳಿ ಕೆರೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ಹಾಲಿ 20 ಅಡಿ ಅಗಲದ ಕಚ್ಚಾ ರಸ್ತೆಯಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಮಲ್ಲತ್ತಹಳ್ಳಿ ಕೆರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭೇಟಿ ನೀಡುವುದರಿಂದ ಸದರಿ ರಸ್ತೆಯನ್ನು 60 ಅಡಿ ಅಗಲಕ್ಕೆ ವಿಸ್ತರಿಸಿ, ರಸ್ತೆ ಅಭಿವೃದ್ಧಿಪಡಿಸುವುದು ಅವಶ್ಯಕವಾಗಿದೆ ಎಂದು ಹಾಗೂ ಈ ಸಂಬಂಧ ಗಿಡದಕೊನೇನಹಳ್ಳಿ ಗ್ರಾಮದ ಸರ್ವೆ ನಂ. 5 ರಲ್ಲಿನ ಸುಮಾರು 45,540 ಚ.ಅಡಿ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಳ್ಳಲು (1) ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಲಯ, (2) ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ಮತ್ತು ಅಪರ ಆಯುಕ್ತರು, ರಾಜರಾಜೇಶ್ವರಿನಗರ ವಲಯ ರವರು ಶಿಫಾರಸ್ಸು ಮಾಡಿರುತ್ತಾರೆ.

ಭೂಸ್ವಾಧೀನ ಪ್ರಸ್ತಾವನೆಯೊಂದಿಗೆ ಸಲ್ಲಿಸಲಾಗಿರುವ ಭೂಸ್ವಾಧೀನ ಪ್ರಸ್ತಾಪಿತ ಆಸ್ತಿಗಳ ವಿವರ, ವ್ಯಾಲುಯ್ಯೇಷನ್ ತಃಖ್ತೆ, ನಮೂನೆ ಎ ಮತ್ತು ಡಿ ಮತ್ತು ಭೂಮಾಪಕರು ಸದರಿ ಪ್ರದೇಶದ ಅಳತೆ ಮಾಡಿ ತಯಾರಿಸಿರುವ ನಕ್ಷೆಯನ್ನು ಪರಿಶೀಲಿಸಲಾಗಿದೆ. ಅದರಂತೆ, ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ಜಮೀನು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಗಿಡದಕೊನೇನಹಳ್ಳಿ ಗ್ರಾಮದ ಸರ್ವೆ 5 ರ ಪೈಕಿ ಜಮೀನಾಗಿದ್ದು, ಇದರಲ್ಲಿನ ಒಟ್ಟು 6 ಎಕರೆ-7 ಗುಂಟೆ ವಿಸ್ತೀರ್ಣದಲ್ಲಿ (759 x 60)= 45,540 ಚದರ ಅಡಿ ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಲಾಗಿದೆ. 2010-2011ನೇ ಸಾಲಿನ ಪಹಣಿ ಪತ್ರಿಕೆ (RTC) ಯನ್ನು ಪರಿಶೀಲಿಸಲಾಗಿ, ಸದರಿ ಜಮೀನುಗಳ/ಆಸ್ತಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಸರ್ವೆ ನಂ. | ಒಟ್ಟು ವಿಸ್ತೀರ್ಣ ಎ-ಗುಂ | ಆರ್.ಟಿ.ಸಿ.ಯಂತೆ ಖಾತೆದಾರರ / ಅನುಭವದಾರರ ಹೆಸರು | ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ವಿಸ್ತೀರ್ಣ (ಚ.ಅ.ಗಳಲ್ಲಿ) | ಚಕ್ಕುಬಂದಿ | | | |
|---|---|---|---|---|---|---|---|
| | | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
| 5 | 6-07 | ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ, ರಾಜಣ್ಣ ಬಿನ್ ಲೇಟ್ ಮಾರಪ್ಪ, ಚಂದ್ರಮತಿ ಕೋಂ ಚಂದ್ರೇಗೌಡ, ಮಧುಸೂಧನ್, ಗಂಗಮ್ಮ, ರಮೇಶ್ ರೇಖಾ ಬಿನ್ ನಾಗರಾಜ್, ಟಿ.ಜಿ.ರಂಗಶಾಮಯ್ಯ, ಟಿ.ಆರ್.ಚಂದ್ರಶೇಖರಯ್ಯ, ಎಸ್ ಮಂಜುಳ ಬಿನ್ ಸಿದ್ದಪ್ಪ, | 45,540 (759x60) | ಸ.ನಂ. 5 ರ ಉಳಿಕೆ | ಡಿ-ಗ್ರೂಪ್ ನೌಕರರ ಬಡಾವಣೆ | ರಸ್ತೆ | ಮಲ್ಲತ್ತ ಹಳ್ಳಿ ಕೆರೆ ಜಾಗ |

......................2

ಭೂಸ್ವಾಧೀನಪಡಿಸಿಕೊಳ್ಳಲು ಇಚ್ಛಿಸಿರುವ ಜಾಗವು ಕೃಷಿ ಜಮೀನಾಗಿದ್ದು, ಸದರಿ ಜಾಗದಲ್ಲಿ 3 ತಾತ್ಕಾಲಿಕ ಷೆಡ್‌ಗಳು ಇರುವುದಾಗಿ ಕಾಮಗಾರಿ ಇಲಾಖೆಯಿಂದ ವರದಿ ನೀಡಲಾಗಿದೆ. ಈ ಜಮೀನಿಗೆ ಭೂಪರಿವರ್ತನೆ ಆದೇಶವಾಗಿರುವ ಬಗ್ಗೆಯಾಗಲೀ, ಹಿಂದಿನ ನಗರಸಭೆಯಲ್ಲಾಗಲೀ ಅಥವಾ ಹಾಲಿ ಪಾಲಿಕೆಯಲ್ಲಾಗಲೀ ಖಾತೆ ನೋಂದಾವಣೆಯಾಗಿರುವ ಬಗ್ಗೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಲಭ್ಯ ಆರ್.ಟಿ.ಸಿ. ದಾಖಲೆ ಮತ್ತು ಮ್ಯುಟೇಶನ್ ಪ್ರತಿಗಳಲ್ಲಿ ಕಂಡುಬಂದಂತೆ ಗಿಡ್ಡದಕೊನೇನಹಳ್ಳಿ ಗ್ರಾಮದ ಸರ್ವೆ 5 ರಲ್ಲಿ ಒಟ್ಟು 6 ಎಕರೆ-7 ಗುಂಟೆ ವಿಸ್ತೀರ್ಣದಲ್ಲಿ 7 ಗುಂಟೆ ಖರಾಬು ಕಳೆದು ಜಾತಾ 6 ಎಕರೆ ಜಮೀನಿನಲ್ಲಿ ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ ಮತ್ತು ರಾಜಣ್ಣ ಬಿನ್ ಲೇಟ್ ಮಾರಪ್ಪ ನವರಿಗೆ ಜಂಟಿಯಾಗಿ 2 ಎಕರೆ 33 ಗುಂಟೆ, ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ ರವರಿಗೆ 14 ಗುಂಟೆ ಮತ್ತು 37 1/2 ಗುಂಟೆ, ರಾಜಣ್ಣ ಬಿನ್ ಲೇಟ್ ಮಾರಪ್ಪ ನವರಿಗೆ 25 1/2 ಗುಂಟೆ, ಟಿ. ಜಿ. ರಂಗಶಾಮಯ್ಯ ಮತ್ತು ಟಿ.ಆರ್.ಚಂದ್ರಶೇಖರಯ್ಯ ರವರಿಗೆ 1 ಎಕರೆ, ಎಸ್ ಮಂಜುಳ ಬಿನ್ ಸಿದ್ದಪ್ಪ ರವರಿಗೆ 10 ಗುಂಟೆ ಜಮೀನಿಗೆ ಕಂದಾಯ ಖಾತೆ ದಾಖಲಾಗಿರುತ್ತದೆ. ಭೂಸ್ವಾಧೀನ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿರುವ ಆಸ್ತಿಗಳ ಖಾತೆದಾರರ/ಅನುಭವದಾರರ ಪಟ್ಟಿಯಲ್ಲಿ ಮೇಲ್ಕಂಡ ಖಾತೆದಾರರ ಜೊತೆ ಚಂದ್ರಮತಿ ಕೋಂ ಚಂದ್ರೇಗೌಡ, ಮಧುಸೂಧನ್, ಗಂಗಮ್ಮ, ರಮೇಶ್, ರೇಖಾ ಬಿನ್ ನಾಗರಾಜ್ ರವರ ಹೆಸರುಗಳನ್ನು ಸಹ ಉಲ್ಲೇಖಿಸಲಾಗಿದೆ. ಆದರೆ ಈ ಜಮೀನಿನಲ್ಲಿ ಅವರಿಗಿರುವ ಹಕ್ಕಿನ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಗಿಡದಕೊನೇನಹಳ್ಳಿ ಸರ್ವೆ ನಂ.5 ರಲ್ಲಿರುವ ಒಟ್ಟು 6 ಎಕರೆ 7 ಗುಂಟೆ ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ 45,540 ಚ.ಅ. ಜಾಗದ ಹಕ್ಕು ಯಾರ ಯಾರ ಹಕ್ಕುದಾಖಲೆಯಲ್ಲಿರುತ್ತದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ. ಹಾಗೂ ಈ ಜಮೀನಿನಲ್ಲಿ 7 ಗುಂಟೆ ಖರಾಬು ಇದ್ದು, ಭೂಸ್ವಾಧೀನ ಪ್ರಸ್ತಾಪಿತ ಜಾಗದಲ್ಲಿ ಖರಾಬು ಜಾಗ (ಉದಾ: ಕಾಲುದಾರಿ, ಬಂಡಿದಾರಿ, ಹಳ್ಳ ಇತ್ಯಾದಿ) ಸೇರಿದೆಯೇ/ಇಲ್ಲವೇ ಎಂಬ ಬಗ್ಗೆ ಸಹ ಮಾಹಿತಿ ಇರುವುದಿಲ್ಲ. ಭೂಸ್ವಾಧೀನ ಪ್ರಸ್ತಾಪಿತ ಜಾಗದಲ್ಲಿ ಖರಾಬು ಇದ್ದಲ್ಲಿ ಅದನ್ನು ಕಳೆದು ಉಳಿಕೆ ಜಾಗವನ್ನು ಮಾತ್ರ ಭೂಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಗ್ರಾಮ ನಕಾಶೆ/ ಟಿಪ್ಪಣಿ/ ಖರಾಬು ಉತಾರು ಗಳನ್ನು ಪಡೆದು ಪರಿಶೀಲಿಸಬೇಕಾಗುತ್ತದೆ. ಅಲ್ಲದೆ, ಪ್ರಸ್ತಾಪಿತ ಜಾಗದಲ್ಲಿ ಮೂರು ಷೆಡ್‌ಗಳು ಇದ್ದು, ಇವು ಸಿದ್ದಪ್ಪ ಬಿನ್ ಲೇಟ್ ಮಾರಪ್ಪ, ಮಧುಸೂದನ್ ಮತ್ತು ಗಂಗಮ್ಮ ರವರು ನಿರ್ಮಾಣ ಮಾಡಿರುತ್ತಾರೆ ಎಂದು ವರದಿ ಸಲ್ಲಿಸಲಾಗಿದೆ. ಆದರೆ ಈ ಬಗ್ಗೆ ಯಾವುದೇ ಪೂರಕ ದಾಖಲೆಗಳು ಕಂಡುಬರುವುದಿಲ್ಲ. ಭೂಸ್ವಾಧೀನ ಕಾಯ್ದೆಯ ಕಲಂ 5(ಎ) ವಿಚಾರಣೆಯಲ್ಲಿ ಭೂಸ್ವಾಧೀನ ಪ್ರಸ್ತಾಪಿತ ಜಮೀನಿನ ಹಕ್ಕುದಾಖಲೆಗಳನ್ನು ಪರಿಶೀಲಿಸಿ ಅಂತಿಮಗೊಳಿಸುವ ಷರತ್ತಿಗೆ ಒಳಪಟ್ಟು, ಗಿಡದಕೊನೇನಹಳ್ಳಿ ಗ್ರಾಮದ ಸರ್ವೆ ನಂ. 5ರಲ್ಲಿನ 45,540 ಚ.ಅ.ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯಪಡಲಾಗಿದೆ.

ದಿನಾಂಕ: 21-09-2011 ರ ಕರ್ನಾಟಕ ಸರ್ಕಾರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿವಿಸಿ-19/2010-11 ರ ಸ್ಥಿರಾಸ್ತಿಗಳ ಅಂದಾಜು ಮಾರುಕಟ್ಟೆ ಮಾರ್ಗಸೂಚಿ ದರದನ್ವಯ ಗಿಡದಕೊನೇನಹಳ್ಳಿ ಗ್ರಾಮದಲ್ಲಿನ ಕೃಷಿ ಜಮಿನಿಗೆ ಪ್ರತಿ ಎಕರೆಗೆ ರೂ.100 ಲಕ್ಷಗಳನ್ನು ನಿಗಧಿಮಾಡಲಾಗಿದ್ದು, ಅದರಂತೆ ಭೂಸ್ವಾಧೀನ ಸ್ವತ್ತಿಗೆ ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

"ಭೂ ಪರಿಹಾರ ಮತ್ತು ಇತರೆ ವೆಚ್ಚಗಳು"

| ಕ್ರ ಸಂ | ವಿವರಣೆ | ಮೊಬಲಗು(ರೂ.) |
|---|---|---|
| 1 | ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ 45,540 ಚ.ಅ. ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ 100 ಲಕ್ಷ ರೂಗಳಂತೆ ಚ.ಅ.ಗೆ 230/- | **1,04,74,200/-** |
| 2 | **3 ಷೆಡ್‌ಗಳ ಮೌಲ್ಯ (ಕಾಮಗಾರಿ ಇಲಾಖೆಯ ವರದಿಯಂತೆ)** | **7,80,000/-** |
| | ಒಟ್ಟು(1+2) | **1,12,54,200/-** |

.....................3

| | | |
|---|---|---|
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆಯ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | **13,50,504/-** |
| | 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರ ಅನ್ವಯ ಶೇಕಡಾ 30 ರಂತೆ ಶಾಸನಬದ್ದ ಭತ್ಯೆ | **33,76,260/-** |
| | **(1+2+3)** | **1,59,80,964/-** |
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | **ಕೈಬಿಡಲಾಗಿದೆ** |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | **ಕೈಬಿಡಲಾಗಿದೆ** |
| 6 | ಪ್ರಕಟಣಾ ವೆಚ್ಚ | **2,00,000/-** |
| | ಒಟ್ಟು | **1,61,80,964/-** |

**ಷರಾ:** ದಿನಾಂಕ: 5-9-1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಒಂದು ಕೋಟಿ ಅರವತ್ತೊಂದು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಅರವತ್ನಾಲ್ಕು ರೂಗಳು ಮಾತ್ರ)**

ಈ ಪ್ರಕರಣದಲ್ಲಿ ಸ್ಥಳೀಯ ನಿವಾಸಿಗಳು ಸದರಿ ರಸ್ತೆ ನಿರ್ಮಾಣ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದು(ನಂ.15868/2011), ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಮೇಲ್ಕಂಡ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಂದಾಜು ಭೂಸ್ವಾಧೀನ ವೆಚ್ಚ ರೂ.**1,61,80,964/- (ಒಂದು ಕೋಟಿ ಅರವತ್ತೊಂದು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಅರವತ್ನಾಲ್ಕು ರೂಗಳು ಮಾತ್ರ)** ಗಳಾಗಲಿದ್ದು, ಈ ಪ್ರಕರಣದ ಸ್ವತ್ತುಗಳನ್ನು 1894ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಂಡು ಭೂ-ಪರಿಹಾರ ಮತ್ತು ಇತರೆ ವೆಚ್ಚಗಳನ್ನು 2011-12 ನೇ ಸಾಲಿನ ಆಯವ್ಯಯದಲ್ಲಿ ಭರಿಸುವ ಬಗ್ಗೆ ಸೂಕ್ತ ತೀರ್ಮಾನವನ್ನು ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-03-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:12-04-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:30-03-2012ರ ಟಿಪ್ಪಣಿಯ ಬಗ್ಗೆ ಸ್ಪಷ್ಟವಾದ ನಿರ್ಣಯವನ್ನು ಕೈಗೊಳ್ಳಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಹಿಂದಿರುಗಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

....................4

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:30-03-2012ರ ಟಿಪ್ಪಣಿಯ ಬಗ್ಗೆ ಸ್ಪಷ್ಟವಾದ ನಿರ್ಣಯವನ್ನು ಕೈಗೊಳ್ಳಲು ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಹಿಂದಿರುಗಿಸುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 26 (127) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಿಲ್ಲಾ ಸಂಚಾಲಕರು-ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ರವರು ದಿನಾಂಕ:30-08-2011 ರಂದು ಪೂಜ್ಯ ಮಹಾಪೌರರಿಗೆ ಮನವಿ ಪತ್ರ ಸಲ್ಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ : 59ರ ವ್ಯಾಪ್ತಿಯಲ್ಲಿ ಬರುವ ಜೀವನಹಳ್ಳಿ ದೊಡ್ಡಗುಂಟೆ ಗ್ರಾಮದಲ್ಲಿರುವ ಸರ್ವೆ ನಂ.158 ರಲ್ಲಿ ನಿರ್ಮಿಸಿರುವ ಕ್ರೀಡಾಂಗಣಕ್ಕೆ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್ ರವರ ಹೆಸರನ್ನು ನಾಮಕರಣ ಮಾಡಲು ಕೋರಿರುತ್ತಾರೆ. ಪೂಜ್ಯ ಮಹಾಪೌರರ ದಿನಾಂಕ:08-09-2011ರ ಟಿಪ್ಪಣಿಯಲ್ಲಿ ಸದರಿ ವಿಷಯದ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಮಂಡಿಸಲು ಸೂಚಿಸಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 21 ಮಂದಿ, ವಿರೋಧವಾಗಿ ಒಬ್ಬರು ಸಹಿ ಮಾಡಿರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976ರ 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ, ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಹಾಗೂ ಕಲಂ 7 ರಲ್ಲಿ ಸಾಮಾನ್ಯವಾಗಿ ಒಂದು ನಗರ ಪಾಲಿಕೆಯ ಪ್ರದೇಶದೊಳಗಿನ ಯಾವುದೇ ಎರಡು ಬೀದಿಗಳು, ವೃತ್ತಗಳು, ಚೌಕಗಳು, ಪಾರ್ಕ್‌ಗಳು, ಉದ್ಯಾನವನಗಳು, ಯಾವುದೇ ಇತರ ಸಾರ್ವಜನಿಕ ಸ್ಥಳಗಳು ಒಂದೇ ರೀತಿಯ ಹೆಸರನ್ನು ಹೊಂದಿರತಕ್ಕದ್ದಲ್ಲ ಎಂದು ಉಲ್ಲೇಖಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ ವಾರ್ಡ್ ಸಂಖ್ಯೆ: 75, ಜೋಗುಪಾಳ್ಯದ ಫುಟ್‌ಬಾಲ್ ಸ್ಟೇಡಿಯಂಗೆ ಕರ್ನಾಟಕ ರತ್ನ ಡಾ॥ ರಾಜ್‌ಕುಮಾರ್ ರವರ ಹೆಸರು ಹಾಗೂ ಗೌತಮಪುರದ ಫುಟ್‌ಬಾಲ್ ಸ್ಟೇಡಿಯಂಗೆ ಡಾ॥ ಬಿ.ಆರ್.ಅಂಬೇಡ್ಕರ್ ರವರ ಹೆಸರನ್ನು ನಾಮಕರಣ ಮಾಡಲಾಗಿದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:59ರ ವ್ಯಾಪ್ತಿಯಲ್ಲಿ ಬರುವ ಜೀವನಹಳ್ಳಿ ದೊಡ್ಡಗುಂಟೆ ಗ್ರಾಮದಲ್ಲಿರುವ ಸರ್ವೆ ನಂ. 158 ರಲ್ಲಿ ನಿರ್ಮಿಸಿರುವ ಕ್ರೀಡಾಂಗಣಕ್ಕೆ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಹೆಸರನ್ನು ನಾಮಕರಣ ಮಾಡಲು ಅವಕಾಶವಿರುವುದಿಲ್ಲ.

ತತ್ಸಂಬಂಧ ಪ್ರಸ್ತಾವನೆ ಕುರಿತಂತೆ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:06-02-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-03-2012ರ ನಿರ್ಣಯ.

...................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-03-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 06-03-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 27 (172) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಹೆಚ್.ಸುರೇಶ್, ನಗರ ಪಾಲಿಕೆ ಸದಸ್ಯರು, ದಿನಾಂಕ:12-12-2011 ರಂದು ಪೂಜ್ಯ ಮಹಾಪೌರರಿಗೆ ಮನವಿ ಪತ್ರ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:181ರ ವ್ಯಾಪ್ತಿಯಲ್ಲಿ ಬರುವ ಇಸ್ರೋ ಬಡಾವಣೆ, 8ನೇ ಬಿ ಮುಖ್ಯ ರಸ್ತೆ, 17ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉದ್ಯಾನವನಕ್ಕೆ "ಪ್ರೊ. ಸತೀಶ್ ಧಾವನ್ ಉದ್ಯಾನವನ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಪ್ರೊ. ಸತೀಶ್ ಧಾವನ್ ರವರು ಖ್ಯಾತ ವಿಜ್ಞಾನಿಗಳಾಗಿದ್ದು, ಸದರಿಯವರು ಪದ್ಮವಿಭೂಷಣ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಸದರಿಯವರು ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 16 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೆ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976ರ 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು, ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ, ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 181ರ ವ್ಯಾಪ್ತಿಯಲ್ಲಿ ಬರುವ ಇಸ್ರೋ ಬಡಾವಣೆ, 8ನೇ ಬಿ ಮುಖ್ಯ ರಸ್ತೆ, 17ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉದ್ಯಾನವನಕ್ಕೆ "ಪ್ರೊ. ಸತೀಶ್ ಧಾವನ್ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-05-2012 ರ ಟಿಪ್ಪಣಿ ಹಾಗೂ ದಿನಾಂಕ:21-05-2012 ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಿದ್ದು, "ಪ್ರೊ. ಸತೀಶ್ ಧಾವನ್ ಉದ್ಯಾನವನ" ಎಂದು ನಾಮಕರಣ ಮಾಡುವ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-06-2012ರ ನಿರ್ಣಯವನ್ನು ಒಪ್ಪುವುದು".

.....................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 29 (174) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:56ರ ವ್ಯಾಪ್ತಿಯಲ್ಲಿ ಬರುವ ಆಂಧ್ರ ಕಾಲೋನಿ ಪ್ರದೇಶಕ್ಕೆ "ಆನಂದನಗರ" ಎಂಬುದಾಗಿ ನಾಮಕರಣ ಮಾಡುವ ಬಗ್ಗೆ ದಿನಾಂಕ:03-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:04(287)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು, ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:13-04-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:56ರ ವ್ಯಾಪ್ತಿಯಲ್ಲಿ ಬರುವ ಆಂಧ್ರ ಕಾಲೋನಿ ಪ್ರದೇಶಕ್ಕೆ "ಆನಂದನಗರ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30–07–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 30 (175) / 2012–13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ ಕ್ರೀಡಾಂಗಣಕ್ಕೆ "ಚಿಕ್ಕ ಬಂಡಪ್ಪ ರಾಮಯ್ಯ ಕ್ರೀಡಾಂಗಣ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:03–03–2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:341/2011–12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು, ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:13–04–2012 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಿಸಿರುವ ಕ್ರೀಡಾಂಗಣಕ್ಕೆ "ಚಿಕ್ಕ ಬಂಡಪ್ಪ ರಾಮಯ್ಯ ಕ್ರೀಡಾಂಗಣ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05–07–2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:05–07–2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:05–07–2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 31 (176) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಗೆ ಬರುವ ಹೆಚ್.ಎಂ.ಟಿ. ಲೇಔಟ್ 1ನೇ ಎ ಕ್ರಾಸ್ ರಸ್ತೆಗೆ "ಶ್ರೀ ಚೌಡೇಶ್ವರಿ ದೇವಸ್ಥಾನ ರಸ್ತೆ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:03-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:343/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು, ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:13-04-2012 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:17ರ ವ್ಯಾಪ್ತಿಗೆ ಬರುವ ಹೆಚ್.ಎಂ.ಟಿ. ಲೇಔಟ್ 1ನೇ ಎ ಕ್ರಾಸ್ ರಸ್ತೆಗೆ "ಶ್ರೀ ಚೌಡೇಶ್ವರಿ ದೇವಸ್ಥಾನ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 32 (177) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:168ರ ಪಟ್ಟಾಭಿರಾಮನಗರದ 46ನೇ ಅಡ್ಡರಸ್ತೆಯಲ್ಲಿರುವ ಅಕ್ಕಮಹಾದೇವಿ ಉದ್ಯಾನವನದ ಪಕ್ಕದಲ್ಲಿರುವ ನಗರ ಪಾಲಿಕೆಯ ವೃಕ್ಷ ಉದ್ಯಾನವನಕ್ಕೆ "ವಿಜಯ ವೃಕ್ಷ ಉದ್ಯಾನವನ" ಎಂಬುದಾಗಿ ನಾಮಕರಣ ಮಾಡುವ ಬಗ್ಗೆ ದಿನಾಂಕ:03-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:3(286)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು, ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:13-04-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:168ರ ಪಟ್ಟಾಭಿರಾಮನಗರದ 46ನೇ ಅಡ್ಡರಸ್ತೆಯಲ್ಲಿರುವ ಅಕ್ಕಮಹಾದೇವಿ ಉದ್ಯಾನವನದ ಪಕ್ಕದಲ್ಲಿರುವ ನಗರ ಪಾಲಿಕೆ ವೃಕ್ಷ ಉದ್ಯಾನವನಕ್ಕೆ "ವಿಜಯ ವೃಕ್ಷ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 33 (178) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:12ರ ವ್ಯಾಪ್ತಿಯಲ್ಲಿ ಬರುವ ಅಬ್ಬಿಗೆರೆ ಮುಖ್ಯರಸ್ತೆ ಮತ್ತು ಪೈಪ್‌ಲೇನ್ ರಸ್ತೆ ಕೂಡುವ ವೃತ್ತಕ್ಕೆ "ದಿವಂಗತ ಪಿಳ್ಳಪ್ಪ ವೃತ್ತ" ಎಂಬುದಾಗಿ ನಾಮಕರಣ ಮಾಡುವುದೆಂದು ದಿನಾಂಕ:03-03-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:05(312)/2011-12 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು, ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:13-04-2012 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:12ರ ವ್ಯಾಪ್ತಿಯಲ್ಲಿ ಬರುವ ಅಬ್ಬಿಗೆರೆ ಮುಖ್ಯರಸ್ತೆ ಮತ್ತು ಪೈಪ್‌ಲೇನ್ ರಸ್ತೆ ಕೂಡುವ ವೃತ್ತಕ್ಕೆ "ದಿವಂಗತ ಪಿಳ್ಳಪ್ಪ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:05-07-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 37 (179) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ವೈಟ್‌ಫೀಲ್ಡ್‌ನ **Export Promotion Industrial Park (EPIP)** ನಲ್ಲಿ ಬರುವ ವಿವಿಧ ರಸ್ತೆಗಳ ಅಭಿವೃದ್ಧಿ, ಡಾಂಬರೀಕರಣ ಕಾಮಗಾರಿಗಳ ಹಾಗೂ ಅಂಡರ್‌ಪಾಸ್ ಅನ್ನು ನಿರ್ಮಾಣ ಮಾಡಲು ರೂ.46.00 ಕೋಟಿಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ವಾಣಿಜ್ಯ ಇಲಾಖೆಯು ಅನುಮೋದನೆ ನೀಡಿರುತ್ತದೆ. ಈ ಯೋಜನೆಗೆ ರೂ.20.00 ಕೋಟಿಗಳನ್ನು **ASIDE (Assistance to States for infrastructure Development and Exports)** ಯೋಜನೆಯಡಿ ವಿಶೇಷ ಅನುದಾನವನ್ನಾಗಿ ಒದಗಿಸಲಾಗಿದೆ. ಸದರಿ ಯೋಜನೆಯ **Funding pattern** ಈ ಕೆಳಕಂಡಂತಿರುತ್ತದೆ.

| | |
|---|---|
| **ASIDE Scheme** | ರೂ.20.00 ಕೋಟಿಗಳು |
| **BBMP Share** | ರೂ.26.00 ಕೋಟಿಗಳು |
| ಒಟ್ಟು | ರೂ.46.00 ಕೋಟಿಗಳು |

ಈ ಯೋಜನೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.26.00 ಕೋಟಿಗಳ ಅನುದಾನವನ್ನು ಕಲ್ಪಿಸಬೇಕಾಗಿರುತ್ತದೆ. ಪಾಲಿಕೆ ಸಭೆಯ ವಿಷಯದ ಸಂಖ್ಯೆ: 16(242)/2010-11, ದಿನಾಂಕ:24-02-2011 ರಲ್ಲಿ ಬೆಂಗಳೂರು ವೈಟ್‌ಫೀಲ್ಡ್‌ನ ವಿಶೇಷ ವಿತ್ತ ವಲಯದ **Export Promotion Industrial Park (EPIP)** ವಲಯದಲ್ಲಿ 2ನೇ ಹಂತದಲ್ಲಿ ಬರುವ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಹಾಗೂ ಅಂಡರ್‌ಪಾಸ್ ನಿರ್ಮಾಣದ ವಿವರವಾದ ಯೋಜನಾ ವರದಿಯನ್ನು 2009-10ನೇ ಸಾಲಿನ ದರಗಳನ್ವಯ ಹಾಗೂ ಅನುಮೋದಿತ ಡೇಟಾ ದರಗಳ ಪ್ರಕಾರ ರೂ.46.00 ಕೋಟಿಗಳ ಅಂದಾಜನ್ನು ತಯಾರಿಸಲಾಗಿದ್ದು, ಅಂದಾಜಿಗೆ ಮುಖ್ಯ ಇಂಜಿನಿಯರ್, ರಸ್ತೆ ಮೂಲಭೂತ ಸೌಕರ್ಯರವರು ದಿನಾಂಕ:02-07-2011 ರಂದು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಗೆ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ, ಟೆಂಡರ್ ಕರೆದು ತದನಂತರ ಟೆಂಡರ್ ಮತ್ತು ಆಡಳಿತಾತ್ಮಕ ಅನುಮೋದನೆಗಾಗಿ ಘನ ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವನೆಗೆ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ 16(242)/2010-11, ದಿನಾಂಕ:24-02-2011 ರಲ್ಲಿ ಅನುಮೋದನೆ ನೀಡಿರುತ್ತದೆ.

ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಶೇಷ ವಿಭಾಗ-1 ರವರು ದಿನಾಂಕ:08-07-2011 ರಂದು **E-Procurement** ಮೂಲಕ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಏಕೈಕ ಗುತ್ತಿಗೆದಾರರು ಭಾಗವಹಿಸಿದ್ದ ಕಾರಣ ಟೆಂಡರ್ ಅನ್ನು ರದ್ದುಪಡಿಸಿ, ದಿನಾಂಕ:09-11-2011 ರಂದು ಪುನ: 2ನೇ ಬಾರಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

2ನೇ ಟೆಂಡರ್ ಕರೆಗೆ ಮೆ॥ ಜಿ.ವಿ.ಆರ್. ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ಮತ್ತು ಮೆ॥ ಇಂಜಿನಿಯರಿಂಗ್ ಪ್ರಾಜೆಕ್ಟ್ ಇಂಡಿಯಾ ಲಿಮಿಟೆಡ್ ರವರುಗಳು ಟೆಂಡರ್ ಸಲ್ಲಿಸಿದ್ದು, ಇಬ್ಬರು ಬಿಡ್‌ದಾರರು ಅರ್ಹರಾದ ಹಿನ್ನಲೆಯಲ್ಲಿ ಸದರಿಯವರುಗಳ ತಾಂತ್ರಿಕ ಮೌಲ್ಯ ಮಾಪನದಲ್ಲಿ ಮೆ॥ ಜಿ.ವಿ.ಆರ್. ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರು ಅರ್ಹರಾಗಿರುತ್ತಾರೆ.

ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಮೆ॥ ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರ ಆರ್ಥಿಕ ಬಿಡ್ಡನ್ನು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

..........................2

C

| ಕ್ರ ಸಂ. | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ವಿವರ | ಟೆಂಡರ್‌ಗಿಟ್ಟ ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಶೇಕಡವಾರು ಹೆಚ್ಚು/ಕಡಿಮೆ (2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ) | ಶೇಕಡವಾರು ಹೆಚ್ಚು/ಕಡಿಮೆ (2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ) |
|---|---|---|---|---|---|
| 1 | ಮೆ॥ ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ | ರೂ.41,15,15,142 | ರೂ.47,25,24,867 | 14.83% ಹೆಚ್ಚು | 9.47% ಹೆಚ್ಚು |

ಸದರಿ ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ದರಗಳನ್ನು ಚಾಲ್ತಿಯಲ್ಲಿರುವ 2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರವು ಶೇ.9.47 ರಷ್ಟು ಹೆಚ್ಚಾಗಿರುತ್ತದೆ. ಈ ದರಗಳು ಹೆಚ್ಚಾಗಿರುವುದು ಕಂಡು ಬಂದಿರುವುದರಿಂದ ಸದರಿ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಅಂತಿಮವಾಗಿ ರೂ.47,06,28,912/- ಗಳಿಗೆ ಒಪ್ಪಿದ್ದು, (2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರವು ಶೇ.9.15 ರಷ್ಟು ಹೆಚ್ಚಾಗಿರುತ್ತದೆ) ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ವಿವರ | ಟೆಂಡರ್‌ಗಿಟ್ಟ ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಮೂಲ ಟೆಂಡರ್ ಮೊತ್ತ | ಸಂಧಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಸಂಧಾನದ ನಂತರ 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರ | ಸಂಧಾನದ ನಂತರ 2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಟೆಂಡರ್ ದರ |
|---|---|---|---|---|---|---|
| 1 | ಮೆ॥ ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ | ರೂ.41,15,15,142 | ರೂ.47,25,24,867 | ರೂ.47,06,28,912.40 | 14.36% ಹೆಚ್ಚು | 9.15% ಹೆಚ್ಚು |

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿದ ಯಶಸ್ವಿ ಬಿಡ್ಡುದಾರರಾದ ಮೆ॥ ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರು ಸಂಧಾನದ ನಂತರ 2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ನಮೂದಿಸಿರುವ ಟೆಂಡರ್ ದರವು ಶೇ.9.15 ರಷ್ಟು ಹೆಚ್ಚುವರಿಯಾಗಿದ್ದು, ಸದರಿ ದರವು ಸಮಂಜಸವಾಗಿರುವ ಹಿನ್ನಲೆಯಲ್ಲಿ, ಸದರಿ ಟೆಂಡರ್ ಮೊತ್ತ ರೂ.47,06,28,912.40/- ಗಳ ಮೆ॥ ಜಿ.ವಿ.ಆರ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ರವರ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:21-05-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.........................3

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 01–06–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 38 (180) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of RCC drain from ch.1890 to 2000m (from Charminar road to Jumma Masjid road) in Shivajinagar under Challagatta valley ರ ಕಾಮಗಾರಿಗೆ ಸಂಬಂಧಿಸಿದಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರದ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009-10ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆ॥ ಶ್ರೀ. ರಾಮ್‌ಸಾಯಿ ಕನ್ಸ್‌ಟ್ರಕ್ಷನ್ಸ್, ರವರಿಗೆ ವಹಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರು ನಿಗಧಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಗಿರುತ್ತದೆ.

ಈ ಕಾಮಗಾರಿಗೆ ದಿನಾಂಕ:11-01-2012 ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 20-01-2012 ರಂದು ಶ್ರೀ. ಮಜರ್ ಅಲಿಖಾನ್ ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ, ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ:27-01-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿವೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2009-10ನೇ ಸಾಲಿನ ದರಪಟ್ಟಿಯಂತೆ) | ರೂ.2,06,01,634/- |
| 2 | ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,41,191,151/- |
| 3 | ಬಿಡ್ಡುದಾರರಾದ ಶ್ರೀ ಮಜರ್ ಅಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,54,42,688/- |
| 4 | ಸಂಧಾನದ ನಂತರ ಶ್ರೀ ಮಜರ್ ಅಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,54,42,688/- |
| 5 | ಟೆಂಡರ್‌ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ಕಡಿಮೆ | 23.50 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗಿಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ | 5.17 ಹೆಚ್ಚುವರಿ |

ಶ್ರೀ. ಮಜರ್ ಅಲಿಖಾನ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.23.50 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ, 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇ.5.17 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬಂದಿರುತ್ತದೆ.

..........................2

ಸಾರ್ವಜನಿಕರ ಹಿತದೃಷ್ಟಿಯಿಂದ ಕಾಮಗಾರಿಯ ಜರೂರತೆಯ ಹಿನ್ನಲೆಯಲ್ಲಿ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ, ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಅನುವಾಗುವಂತೆ ಗುತ್ತಿಗೆದಾರರಿಗೆ ಲೆಟರ್ ಆಫ್ ಇಂಡೆಂಟ್ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ ಏಕೈಕ ಬಿಡ್ಡುದಾರರಾದ ಶ್ರೀ. ಮಜರ್ ಅಲಿಖಾನ್ ರವರಿಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಅನುವಾಗುವಂತೆ ಗುತ್ತಿಗೆದಾರರಿಗೆ ಲೆಟರ್ ಆಫ್ ಇಂಡೆಂಟ್ ನೀಡಿರುವ ಕ್ರಮವನ್ನು ಸ್ಥಿರೀಕರಿಸಿ, ಇವರ ಸಂಧಾನಿತ ಟೆಂಡರ್ ಮೊತ್ತ ರೂ.2,54,42,688/- (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.23.50 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011-12 ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.5.17 ರಷ್ಟು ಹೆಚ್ಚುವರಿ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:11-05-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21-06-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:
21-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 39 (181) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ಕೆ.ಎಸ್.ಆರ್.ಟಿ.ಸಿ. ಲೇಔಟ್‌ನಲ್ಲಿರುವ ಆಟದ ಮೈದಾನವನ್ನು ಅಭಿವೃದ್ಧಿಪಡಿಸಲು ಮಾನ್ಯ ಗೃಹ ಹಾಗೂ ಸಾರಿಗೆ ಸಚಿವರು, ಸ್ಥಳೀಯ ಶಾಸಕರು ಮತ್ತು ನಗರ ಪಾಲಿಕೆಯ ಸದಸ್ಯರು ಸೂಚಿಸಿರುವ ಮೇರೆಗೆ ಸದರಿ ಆಟದ ಮೈದಾನವನ್ನು ಅಭಿವೃದ್ಧಿಪಡಿಸಲು ರೂ.80.00 ಲಕ್ಷಗಳ ಅಂದಾಜು ಪಟ್ಟಿಯನ್ನು 2010-11ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿನಾಂಕ: 25-02-2012 ರಂದು ಎರಡನೇ ಬಾರಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ 1) ಶ್ರೀ. ಡಿ.ಜಿ.ಜಗದೀಶ್ 2) ಶ್ರೀ. ಜಿ.ಎನ್.ಪ್ರಸನ್ನ 3) ಶ್ರೀ. ಜಿ.ಎಲ್.ಯದುಗಿರಿ, ಗುತ್ತಿಗೆದಾರರುಗಳು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್ಡನ್ನು ದಿನಾಂಕ:28-03-2012 ರಂದು ತೆರೆಯಲಾಗಿತ್ತು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡ್‌ನಲ್ಲಿ 1) ಶ್ರೀ. ಡಿ.ಜಿ.ಜಗದೀಶ್ 2) ಶ್ರೀ. ಜಿ.ಎನ್.ಪ್ರಸನ್ನ ರವರು ಅರ್ಹರಾಗಿರುತ್ತಾರೆ. ಮುಖ್ಯ ಅಭಿಯಂತರರು (ದಕ್ಷಿಣ) ರವರಿಂದ ಅನುಮೋದನೆ ಪಡೆದು ಆರ್ಥಿಕ ಬಿಡ್ಡ್ ಅನ್ನು ದಿನಾಂಕ:17-04-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿವೆ;

| ಕ್ರ ಸಂ. | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ | ನಮೂದಿಸಿರುವ ದರ | ಪ್ರಸಕ್ತ ಸಾಲಿನ ದರದಂತೆ ಹೋಲಿಸಿದಾಗ (ಎಸ್.ಆರ್.2010-11) & SE PWD Cor. Dated:18.03.11 & 29.02.12 | ಸಂಧಾನಿತ ದರ ಪ್ರಸಕ್ತ ಸಾಲಿನ ದರದಂತೆ ಹೋಲಿಸಿದಾಗ (ಎಸ್.ಆರ್.2010-11) & SE PWD Cor. Dated:18.03.11 & 29.02.12 |
|---|---|---|---|---|---|
| 1 | ಶ್ರೀ.ಡಿ.ಜಿ.ಜಗದೀಶ್ | 79,42,246.41 | 98,36,113.25 | 19.73% ಹೆಚ್ಚು | 14.98% ಹೆಚ್ಚು, ರೂ.94,46,266/- |
| 2 | ಶ್ರೀ. ಜಿ.ಎನ್.ಪ್ರಸನ್ನ | | 1,03,16,673.75 | 25.58% ಹೆಚ್ಚು | - |

ಶ್ರೀ. ಡಿ.ಜಿ.ಜಗದೀಶ ರವರು ರೂ.98,36,113.25 ಗಳನ್ನು ನಮೂದಿಸಿದ್ದು, ಇದನ್ನು ಪ್ರಸ್ತುತ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ 19.73% ಹೆಚ್ಚುವರಿ ಮೊತ್ತವಾಗಿದ್ದು, ಅತೀ ಕಡಿಮೆ ದರ ನಮೂದಿಸಿರುವ ಅರ್ಹ ಎಲ್-1 ಗುತ್ತಿಗೆದಾರರಾಗಿರುತ್ತಾರೆ. ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿರುವ ಶ್ರೀ. ಡಿ.ಜಿ.ಜಗದೀಶ ರವರೊಡನೆ ಸಂಧಾನ ನಡೆಸಲಾಗಿ ಸಂಧಾನದ ನಂತರ ಸದರಿಯವರು ರೂ.94,46,266/- ಗಳನ್ನು ನಮೂದಿಸಿರುತ್ತಾರೆ. ಇದನ್ನು ಪ್ರಸಕ್ತ ಸಾಲಿನ 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ 14.98% ಹೆಚ್ಚುವರಿಯಾಗಿದ್ದು, ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿ ಪತ್ರವನ್ನು ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಗೆ ಶ್ರೀ. ಡಿ.ಜಿ.ಜಗದೀಶ ರವರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.94,46,266/- ಗಳನ್ನು ಪ್ರಸಕ್ತ ಸಾಲಿನ 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.14.98% ಹೆಚ್ಚಿನ ದರವಾಗಿದ್ದು, ಸದರಿ ಕಾಮಗಾರಿಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:23-05-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

.........................2

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 01-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 40 (182) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ:43ರ ನಂದಿನಿ ಬಡಾವಣೆಯಲ್ಲಿ ಈಜು ಕೊಳವನ್ನು ಇತರೆ ಕಾಮಗಾರಿಗಳೊಂದಿಗೆ ನಿರ್ಮಿಸುವ ಯೋಜನೆಗೆ ಸಂಬಂಧಿಸಿದಂತೆ, ರೂ.1,000.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಪಟ್ಟಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1 | Construction of Swimming Pool | Est. Cost Rs.190.00 Lakhs |
| 2 | Construction of Annexure Building (Parking, office Building, Library and Gym etc.) | Est. Cost Rs.350.00 Lakhs |
| 3 | Gallary and Drain | Est. Cost Rs.201.00 Lakhs |
| 4 | Filtration equipment | Est. Cost Rs.67.00 Lakhs |
| 5 | Balancing Tank | Est. Cost Rs.4.00 Lakhs |
| 6 | Compound Wall with ACT sheet covering over compound | Est. Cost Rs.21.00 Lakhs |
| 7 | Filtration machinery room | Est. Cost Rs.18.50 Lakhs |
| 8 | Three Nos. Borewell with submersible pump set | Est. Cost Rs.8.90. Lakhs |
| 9 | Water supply and Electrification | Est. Cost Rs.55.20 Lakhs |
| 10 | Consultancy charges @ 2.50% | Est. Cost Rs.22.90 Lakhs |
| 11 | Landscape yard lighting children play area equipment grills, gate & misc | Est. Cost Rs.60.895 Lakhs |
| | **Total Cost** | **Est. Cost Rs.1000.00 Lakhs** |

ಸದರಿ ಕಾಮಗಾರಿಗಳಿಗೆ 2010-11ನೇ ಸಾಲಿನ ಆಯವ್ಯಯದಲ್ಲಿ ರೂ.300.00 ಲಕ್ಷಗಳನ್ನು ಒದಗಿಸಿದ್ದು, ಜಾಬ್ ಸಂಖ್ಯೆಯನ್ನು ಪಡೆಯಲಾಗಿರುತ್ತದೆ ಹಾಗೂ ಸದರಿ ಕಾಮಗಾರಿಗಳಿಗೆ ಬಾಕಿ ಅನುದಾನವನ್ನು ಮುಂದಿನ ಆಯವ್ಯಯದಲ್ಲಿ ಒದಗಿಸಿಕೊಂಡು ಕಾಮಗಾರಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸುವ ಬಗ್ಗೆ ದಿನಾಂಕ: 21-12-2011 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಸದರಿ ತೀರ್ಮಾನಕ್ಕೆ ದಿನಾಂಕ:28-03-2012 ರಂದು ನಡೆದ ಪಾಲಿಕೆ ಸಭೆಯಲ್ಲಿ ಒಪ್ಪಿಗೆ ನೀಡಲಾಗಿರುತ್ತದೆ.

ಸದರಿ ಕಾಮಗಾರಿಯ ಯೋಜನೆಯ ಮೊತ್ತ ರೂ.10.00 ಕೋಟಿ ಆಗಿರುವುದರಿಂದ ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಆಡಳಿತಾತ್ಮಕ ಅನುಮೋದನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ, ವಾರ್ಡ್-43 ರ ಪಾಲಿಕೆ ಸದಸ್ಯರು ಒಂದು ಕೋರಿಕೆಯನ್ನು ಸಲ್ಲಿಸಿ ಈಗಾಗಲೇ ಹಿಂದಿನ ಸಾಲಿನ ಆಯವ್ಯಯದಲ್ಲಿ ರೂ.300.00 ಲಕ್ಷ ಅನುದಾನವನ್ನು ಕಾಯ್ದಿರಿಸಿದ್ದು ಟೆಂಡರ್ ಪ್ರಕ್ರಿಯೆಯನ್ನು ನಡೆಸಲು ಆಗಿಲ್ಲವಾದ್ದರಿಂದ ಹಾಗೂ ಸರ್ಕಾರದ ಅನುಮೋದನೆ ದೊರಕುವುದು ತಡವಾಗಿರುವುದರಿಂದ ಕೂಡಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಅನುಮತಿ ಕೋರಿರುತ್ತಾರೆ. ಆದ್ದರಿಂದ ಪ್ರಸ್ತಾವನೆ ಕುರಿತಂತೆ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

ಅ) ಒಟ್ಟು ಯೋಜನೆಯ ಮೊತ್ತ ರೂ. 10 ಕೋಟಿಗೆ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳಲು ಒಪ್ಪಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು.

.........................2

ಆ) ಯೋಜನೆಯ ಒಟ್ಟು ವೆಚ್ಚದ ಶೇ.40 ರಷ್ಟು ಅನುದಾನವನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಲು ಹಾಗೂ ಉಳಿದ ಮೊತ್ತವನ್ನು ಮುಂಬರುವ ಆರ್ಥಿಕ ವರ್ಷಗಳಲ್ಲಿ ಒದಗಿಸಿಕೊಳ್ಳುವುದು.

ಇ) ಸರ್ಕಾರದ ಅನುಮೋದನೆ ನಿರೀಕ್ಷಿಸಿ 2012-13ನೇ ಸಾಲಿನ ಆಯವ್ಯಯದಲ್ಲಿ ಅನುದಾನಕ್ಕೆ ಸೀಮಿತಿಗೊಳಿಸಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸುವುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ವಾರ್ಡ್-43ರ ನಂದಿನಿ ಬಡಾವಣೆಯಲ್ಲಿ ಈಜುಕೊಳವನ್ನು ನಿರ್ಮಿಸುವ ಕಾಮಗಾರಿಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:07-06-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 41 (183) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:28-03-2012 ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗೃಹ ಕಛೇರಿ ಕೃಷ್ಣದಲ್ಲಿ ನಡೆದ ಸಭೆಯಲ್ಲಿ ಹಾಜರಿದ್ದ ಮಾನ್ಯ ಶಾಸಕರು, ಮಹದೇವಪುರ ಕ್ಷೇತ್ರ ಹಾಗೂ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಂಟಿ ಆಯುಕ್ತರು, ಮಹದೇವಪುರ ವಲಯ, ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮುಖ್ಯ ಅಭಿಯಂತರರು, ಮಹದೇವಪುರ ವಲಯ, ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಸಮ್ಮುಖದಲ್ಲಿ ಚರ್ಚಿಸಿದ ನಿರ್ಣಯದಂತೆ ಮಂಡಿಸಲಾದ ಟಿಪ್ಪಣಿ.

ಮಹದೇವಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬೆಳ್ಳಂದೂರು ವಾರ್ಡ್‌ನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು 2010-11ನೇ ಸಾಲಿನ ಆಯವ್ಯಯದಲ್ಲಿ ರೂ.300.00 ಲಕ್ಷಗಳನ್ನು ಮೀಸಲಿಟ್ಟಿದ್ದು, ಸದರಿ ಅನುದಾನವನ್ನು ಒಳಾಂಗಣ ಕ್ರೀಡಾಂಗಣ ಬದಲಾಗಿ ಬಹುಪಯೋಗಿ ರಂಗಮಂದಿರವನ್ನು ನಿರ್ಮಿಸಲು ಸೂಕ್ತವೆಂದು ನಿರ್ಣಯಿಸಿದರು. ಅದರಂತೆ, ಮಾನ್ಯ ಶಾಸಕರು ಈ ಮೊದಲೇ ದಿನಾಂಕ:17-09-2011 ರಲ್ಲಿ ಮಾನ್ಯ ಆಯುಕ್ತರಲ್ಲಿ ಪತ್ರ ಮುಖೇನ ವರದಿಯನ್ನು ಮಂಡಿಸಿರುತ್ತಾರೆ.

ಅದರಂತೆ, ಬೆಳ್ಳಂದೂರು ವಾರ್ಡ್‌ನಲ್ಲಿರುವ ದೊಡ್ಡ ಕನ್ನಲ್ಲಿ ಗ್ರಾಮದ ಸರ್ವೆ ನಂ.8 ರಲ್ಲಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಮೀಸಲಿಟ್ಟಿರುವ ರೂ.300.00 ಲಕ್ಷಗಳ ಅನುದಾನವನ್ನು ಸಭೆಯ ನಿರ್ಣಯದಂತೆ ಉದ್ದೇಶಿಸಿರುವ ಬಹುಪಯೋಗಿ ರಂಗಮಂದಿರ ಕಟ್ಟಡವನ್ನು ನಿರ್ಮಿಸಲು ಕೋರುತ್ತಾ, ಸದರಿ ಕಾಮಗಾರಿಗೆ ಜಾಬ್ ನಂಬರ್ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ, ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ವಿಷಯವನ್ನು ಮಂಡಿಸಲು ಸೂಚಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಸದರಿ ಕಾಮಗಾರಿಗೆ ಜಾಬ್ ನಂಬರ್ ಹಾಗೂ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26-04-2012ರ ಟಿಪ್ಪಣಿ ಹಾಗೂ ದಿನಾಂಕ:26-04-2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಒಪ್ಪುತ್ತಾ, ವಿಷಯವನ್ನು ಪಾಲಿಕೆ ಸಭೆಯ ಮುಂದೆ ತರಲು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಬೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:
01-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30–07–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 42 (184) / 2012–13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಶವಂತಪುರ ವಾರ್ಡ್ ಸಂಖ್ಯೆ 37ರ ವ್ಯಾಪ್ತಿಯಲ್ಲಿನ ಹಳೆ ಪಂಚಾಯತ್ ನಿಂದ 5ನೇ ಅಡ್ಡ ರಸ್ತೆ, ಎಲ್.ಎನ್. ಕಾಲೋನಿ, 1ನೇ ಸಿ ಮುಖ್ಯರಸ್ತೆ ಮುಖಾಂತರ ಎಸ್.ಡಬ್ಲ್ಯೂಡಿ ವರೆಗೆ ಮತ್ತು ಸುತ್ತಮುತ್ತಲ ಭಾಗದಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಾಣದ ಕಾಮಗಾರಿ ನಿರ್ವಹಿಸಲು ಸ್ಥಳೀಯ ಪಾಲಿಕೆ ಸದಸ್ಯರು ಇಚ್ಛಿಸಿರುತ್ತಾರೆ.

ಆದ್ದರಿಂದ, 2011–12ನೇ ಸಾಲಿನ ಮಳೆ ನೀರು ಕಾಲುವೆ ಅನುದಾನದ ಲೆಕ್ಕ ಶೀರ್ಷಿಕೆ ಪಿ–2309 ರಲ್ಲಿ ಯಶವಂತಪುರ ವಾರ್ಡ್ 37 ರ ಸದರಿ ಕಾಮಗಾರಿಗೆ ರೂ.500.00 ಲಕ್ಷಗಳಿಗೆ ಈಗಾಗಲೇ ಜಾಬ್ ನಂಬರ್ ಪಡೆಯಲಾಗಿರುತ್ತದೆ.

2011–12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಆಧಾರದ ಮೇಲೆ ರೂ.500.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜುಪಟ್ಟಿಗೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಕರೆಯಲು ಅನುಮೋದನೆ ಕೋರಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:05–05–2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 02–06–2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:02–06–2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 02–06–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 43 (185) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ-97ರ ದಯಾನಂದನಗರದಲ್ಲಿ ಪಾಲಿಕೆಯ ವಿವಿದೋದ್ದೇಶ ಕಟ್ಟಡವನ್ನು ನಿರ್ಮಿಸುವ ಕಾಮಗಾರಿಗಾಗಿ ರೂ.200.00 ಲಕ್ಷಗಳ ಅಂದಾಜು ಪ್ರಸ್ತಾವನೆಗಳಿಗೆ (ಪಿ-2251) ರಲ್ಲಿ ಜಾಬ್ ಸಂಖ್ಯೆ ದೊರೆತಿರುತ್ತದೆ ಹಾಗೂ ಈಗಾಗಲೇ ದಿನಾಂಕ:24-01-2011ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿಗಳಲ್ಲಿ 2010-11ನೇ ಸಾಲಿನ ಆಯವ್ಯಯದಲ್ಲಿ ರೂ.200.00 ಲಕ್ಷಗಳನ್ನು ಮೀಸಲಿರಿಸಿ, 2011-12ನೇ ಸಾಲಿನ ಆಯವ್ಯಯದಲ್ಲಿ ರೂ.211.00 ಲಕ್ಷಗಳನ್ನು ಅಳವಡಿಸಿಕೊಳ್ಳಲಾಗಿದೆ ಹಾಗೂ ಜಂಟಿ ಆಯುಕ್ತರು (ಪಶ್ಚಿಮ) ರವರು ದಿನಾಂಕ:20-04-2011 ರಂದು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಅದರಂತೆ ಮುಖ್ಯ ಅಭಿಯಂತರರು (ಪಶ್ಚಿಮ) ರವರು ತಾಂತ್ರಿಕ ಮಂಜೂರಾತಿಯನ್ನು ದಿನಾಂಕ:26-04-2011 ರಂದು ನೀಡಿರುತ್ತಾರೆ. ಕಾರ್ಯಪಾಲಕ ಅಭಿಯಂತರರು, ಯೋಜನೆ (ಪಶ್ಚಿಮ) ರವರು ದಿನಾಂಕ:10-05-2011 ರಂದು ಟೆಂಡರ್ ಕರೆಯಲಾಗಿದ್ದು, ತದನಂತರ ಮುಖ್ಯ ಅಭಿಯಂತರರು (ಜಾಗೃತ ಮತ್ತು ಪಿ.ಪಿ.ಇಡಿ) ರವರು ಕಡತವನ್ನು ಪರಿಶೀಲಿಸಿ ಅಂದಾಜು ಪಟ್ಟಿಯಲ್ಲಿ ಕೆಲವು ನ್ಯೂನತೆಗಳನ್ನು ಗುರುತಿಸಿ, ಅದನ್ನು ಸರಿಪಡಿಸಿಕೊಂಡು ಪರಿಷ್ಕೃತ ಟೆಂಡರ್ ದಾಖಲೆಯನ್ನು ತಯಾರಿಸುವಂತೆ ಹಾಗೂ ಪ್ರಸ್ತುತ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿರುತ್ತಾರೆ ಹಾಗೂ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಂದ ಈ ಹಿಂದೆ ಕರೆಯಲಾಗಿದ್ದ ಟೆಂಡರ್ ಅನ್ನು ರದ್ದುಪಡಿಸುವ ಬಗ್ಗೆ ಅನುಮೋದನೆಯನ್ನು ಪಡೆದುಕೊಳ್ಳಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ) ರವರು ಸೂಚಿಸಿರುವಂತೆ ಸದರಿ ಕಾಮಗಾರಿಗೆ

1. D.P.R
2. Technical justification
3. Design details
4. Mile stone/pert
5. Tender document ಗಳನ್ನು ಅಳವಡಿಸಿಕೊಂಡು 2011-12ನೇ ಸಾಲಿನ ದರಪಟ್ಟಿ ಅನ್ವಯ ರೂ.411.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

| Sl. No. | Name of the Work | Est. Cost Rs. in Lakhs |
|---|---|---|
| 01 | Proposed construction of Multipurpose BBMP office complex in W-97 Dayanandanagar, Bangalore. | 411.00 |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಕಾಮಗಾರಿಗೆ ಈಗಾಗಲೇ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆಗೆ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:20-04-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿ ಒಪ್ಪುತ್ತಾ, ವಿಷಯವನ್ನು ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012ರ ನಿರ್ಣಯ.

..........................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 01-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30–07–2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 44 (186) / 2012–13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, **Construction of RCC drain from ch.2250 to 2400m (Armstrong road) in Shivajinagar under Challagatta valley** ರ ಕಾಮಗಾರಿಗೆ ಸಂಬಂಧಿಸಿದಂತೆ, ಚಲ್ಲಘಟ್ಟ ಮುಖ್ಯ ಕಣಿವೆ C–100 ಶಿವಾಜಿನಗರದ ರಸೆಲ್ ಮಾರುಕಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009–10ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆ॥ ಶ್ರೀ ರಾಮ್‌ಸಾಯಿ ಕನ್‌ಸ್ಟ್ರಕ್ಷನ್ಸ್, ರವರಿಗೆ ವಹಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರು ನಿಗಧಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ:24–02–2012 ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 05–03–2012 ರಂದು ಶ್ರೀ ಮಜರ್ ಅಲಿಖಾನ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ, ಇವರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ:09–03–2012 ರಂದು ತೆರೆಯಲಾಗಿದ್ದು ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2009–10ನೇ ಸಾಲಿನ ದರಪಟ್ಟಿಯಂತೆ) | ರೂ.2,21,31,913/– |
| 2 | ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,85,10,072/– |
| 3 | ಬಿಡ್ಡುದಾರರಾದ ಶ್ರೀ ಮಜರ್ ಅಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 3,18,55,845/– |
| 4 | ಸಂಧಾನದ ನಂತರ ಶ್ರೀ ಮಜರ್ ಅಲಿಖಾನ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,18,24,375/– |
| 5 | ಟೆಂಡರ್‌ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ಕಡಿಮೆ | 43.79 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ | 11.63 ಹೆಚ್ಚುವರಿ |

ಶ್ರೀ. ಮಜರ್ ಅಲಿಖಾನ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.43.79 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ 2011–12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇ.11.63 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಮಜರ್ ಅಲಿಖಾನ್ ರವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾಗಿದ್ದು, ಇವರು ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ.3,18,24,375/- (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.43.79 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011-12 ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.11.63 ರಷ್ಟು ಹೆಚ್ಚುವರಿ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11-05-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21-06-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 21-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 45 (187) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಶವಂತಪುರ ವಾರ್ಡ್ 37ರ ವ್ಯಾಪ್ತಿಯಲ್ಲಿ ಹೆಚ್ಚಾಗಿ ಹಿಂದುಳಿದ ವರ್ಗಗಳ ಜನರು ವಾಸಿಸುತ್ತಿದ್ದು ಹಾಗೂ ಹೆಚ್ಚಾಗಿ ಕೊಳಚೆ ಪ್ರದೇಶದಿಂದ ಕೂಡಿರುತ್ತದೆ. ಇಲ್ಲಿನ ಜನರು ವಾಸಿಸಲು ಮನೆಗಳಿಲ್ಲದೆ ಜೀವನ ನಡೆಸಲು ಬಹಳ ಕಷ್ಟಪಡುತ್ತಿದ್ದಾರೆ. ಇಂತಹ ಕಡು ಬಡವರನ್ನು ಗುರುತಿಸಿ ಅವರಿಗೆ ವಾಸ ಮಾಡಲು ಅನುವಾಗುವಂತೆ ಬಿ.ಕೆ.ನಗರ ಕೊಳಚೆ ಪ್ರದೇಶದ 1ನೇ ಮುಖ್ಯ ರಸ್ತೆಯಲ್ಲಿ ಬಹುಮಹಡಿ ಕಟ್ಟಡದ ಸಂಕೀರ್ಣವನ್ನು ನಿರ್ಮಾಣ ಮಾಡಿಕೊಳ್ಳಲು ಸ್ಥಳೀಯ ಪಾಲಿಕೆ ಸದಸ್ಯರು ಇಚ್ಚಿಸಿರುತ್ತಾರೆ.

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ದಿನಾಂಕ:24-12-2010 ರ ಸಭೆಯಲ್ಲಿ ವಾರ್ಡ್ 37 ರಲ್ಲಿ 2 ಬ್ಲಾಕ್‌ಗಳ ಇ.ಡಬ್ಲ್ಯೂಯು.ಎಸ್ ವಸತಿ ಸಂಕೀರ್ಣ ನಿರ್ಮಾಣ ಮಾಡಲು 2010-11ನೇ ಸಾಲಿನ ಆಯವ್ಯಯದಲ್ಲಿ ಶೇಕಡ 22.75 ರ ಅನುದಾನದಲ್ಲಿ ರೂ.12.60 ಕೋಟಿಗಳನ್ನು ಮಂಜೂರು ಮಾಡಲಾಗಿರುತ್ತದೆ. ಅದರಂತೆ, ಬಿ.ಕೆ.ನಗರ ಕೊಳಚೆ ಪ್ರದೇಶದ 1ನೇ ಮುಖ್ಯ ರಸ್ತೆಯಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗದವರು ವಾಸಿಸಲು ಬಹುಮಹಡಿ ಕಟ್ಟಡ ನಿರ್ಮಾಣ ಮಾಡಲು ಲೆಕ್ಕಶೀರ್ಷಿಕೆ ಪಿ-2340 ಅಡಿಯಲ್ಲಿ ರೂ.4,13,40,000-00 ಗಳಿಗೆ ಈಗಾಗಲೇ ಜಾಬ್ ನಂಬರ್ ನೀಡಲಾಗಿರುತ್ತದೆ. 2010-11ನೇ ಸಾಲಿನ ಲೋಕೋಪಯೋಗಿ ದರ ಪಟ್ಟಿ ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ನ.ಅ.ಇ 587/ಎಂಎನ್‌ವೈ 2011 ದಿನಾಂಕ:30-01-2012 ರಂತೆ ಸದರಿ ಕಾಮಗಾರಿಗೆ ಅನುಮೋದನೆ ನೀಡಬಹುದಾಗಿರುತ್ತದೆ. ಈ ಹಿನ್ನಲೆಯಲ್ಲಿ, ಸದರಿ ಕಾಮಗಾರಿಗೆ ಮರು ಟೆಂಡರ್ ಪ್ರಕ್ರಿಯೆ ನಡೆಸಲು ಅನುಮೋದನೆ ಕೋರಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:12-04-2012 ರ ಟಿಪ್ಪಣಿ ಹಾಗೂ ದಿನಾಂಕ:12-04-2012 ರ ಅಪರ ಆಯುಕ್ತರು (ಯೋಜನೆ) ಇವರ ಟಿಪ್ಪಣಿಯನ್ನು ಒಪ್ಪಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:06-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:06-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:06-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:30-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 46 (188) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:165 ಬನಶಂಕರಿ 2ನೇ ಹಂತ, 17ನೇ ಅಡ್ಡರಸ್ತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಈಜುಕೊಳವನ್ನು ಮೇಲ್ವಿಚಾರಣೆ ಮತ್ತು ನಿರ್ವಹಣೆಗಾಗಿ ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ರವರ ಕಛೇರಿಯಿಂದ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ 10 ವರ್ಷಗಳ ಅವಧಿಯ ಹೊರಗುತ್ತಿಗೆಗೆ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಟೆಂಡರ್‌ದಾರರ ವಿವರಗಳು ಕೆಳಕಂಡಂತಿರುತ್ತವೆ.

| ಕ್ರ ಸಂ | ಗುತ್ತಿಗೆದಾರರ ಹೆಸರು | ನಮೂದಿಸಿರುವ ದರ | ಷರಾ |
|---|---|---|---|
| 1 | ಶ್ರೀ. ಜಿ.ಮೋಹನ್ (ಪೂಜಾ ಏಜೆನ್ಸಿಸ್) | ರೂ.3,06,00,000/- | ಹೆಚ್ಚು ಮೊತ್ತ ನಮೂದಿಸಿರುವ ಗುತ್ತಿಗೆದಾರರ (H1) |
| 2 | ಶ್ರೀ. ಸುಧೀರ್ ವಿ.ಎಸ್. (ಗ್ಲೋರಿಯಸ್ ಆಕ್ವಟೇಕ್ಸ್) | ರೂ.3,05,10,000/- | ಎರಡನೇ ಗುತ್ತಿಗೆದಾರರು (H2) |
| 3 | ಶ್ರೀ. ಸತೀಶ್ ಕುಮಾರ್ (ಸ್ವಿಮ್ ಲೈಫ್) | ರೂ.2,77,77,777/- | ಮೂರನೇ ಗುತ್ತಿಗೆದಾರರು (H3) |

ಮೇಲಿನ ವಿವರಗಳಂತೆ ದಿನಾಂಕ:01-03-2012 ರಂದು ತಾಂತ್ರಿಕ ಬಿಡ್ ತೆರೆಯಲಾಗಿದ್ದು, ಅದರಲ್ಲಿ ಮೇಲ್ಕಂಡ ಮೂರು ಗುತ್ತಿಗೆದಾರರೂ ಸಹ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿರುತ್ತಾರೆ. ಅದರಂತೆ, ಮುಖ್ಯ ಅಭಿಯಂತರರು (ದಕ್ಷಿಣ) ರವರ ಆದೇಶದ ಮೇರೆಗೆ ದಿನಾಂಕ:24-03-2012 ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿ ಸದರಿ ಬಿಡ್ಡುದಾರರಲ್ಲಿ ಶ್ರೀ. ಜಿ.ಮೋಹನ್ (ಪೂಜಾ ಏಜೆನ್ಸೀಸ್) (H1) ರವರು ರೂ.3,06,00,000/- ಗಳನ್ನು ನಮೂದಿಸಿ ಹೆಚ್ಚು ಮೊತ್ತವನ್ನು ನಮೂದಿಸಿರುವ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಈಜು ಕೊಳದ ನಿರ್ಮಾಣವು ಸುಮಾರು ರೂ.4.00 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿರುತ್ತದೆ. ಈ ಕ್ಷೇತ್ರದ ಮಾನ್ಯ ಶಾಸಕರು ಹಾಗೂ ಗೃಹ ಮತ್ತು ಸಾರಿಗೆ ಸಚಿವರು, ಪಾಲಿಕೆ ಸದಸ್ಯರು ಸದರಿ ಈಜು ಕೊಳವನ್ನು ಸಾರ್ವಜನಿಕರ ಸೇವೆಗೆ 15 ದಿನದೊಳಗಾಗಿ ಸಮರ್ಪಿಸಲು ಮೌಖಿಕವಾಗಿ ಆದೇಶಿಸಿರುತ್ತಾರೆ.

1. ಸದರಿ ಈಜುಕೊಳದ ಮೇಲ್ವಿಚಾರಣೆ ಹಾಗೂ ನಿರ್ವಹಣೆಯನ್ನು ಪಾಲಿಕೆಯಿಂದ ನೋಡಿಕೊಳ್ಳಲು ನುರಿತ ಮತ್ತು ತಾಂತ್ರಿಕ ಸಿಬ್ಬಂದಿಯೂ ನಮ್ಮಲ್ಲಿ ಲಭ್ಯವಿರುವುದಿಲ್ಲ. ಆದುದರಿಂದ ಪಾಲಿಕೆಯ ವತಿಯಿಂದ ಮೇಲ್ವಿಚಾರಣೆ ಹಾಗೂ ನಿರ್ವಹಣೆಯನ್ನು ಮಾಡಲು ಸಾಧ್ಯವಾಗುವುದಿಲ್ಲ.
2. ಸದರಿ ಈಜುಕೊಳವನ್ನು ನೋಡಿಕೊಳ್ಳಲು ಭದ್ರತಾ ಸಿಬ್ಬಂದಿಯ ಅವಶ್ಯಕತೆ ಇದ್ದು, ಭದ್ರತಾ ಸಿಬ್ಬಂದಿಯು ಲಭ್ಯವಿರುವುದಿಲ್ಲ.
3. ಈಜುಕೊಳವನ್ನು ಬೇಸಿಗೆಯಲ್ಲಿ ನೀರು ತುಂಬದೆ ಬಿಡುವುದರಿಂದ ಬಿರುಕು ಬಿಟ್ಟು ನೀರಿನ ಸೋರಿಕೆಯಾಗುವ ಸಾಧ್ಯತೆ ಇರುತ್ತದೆ. ಆದುದರಿಂದ, ಸದರಿ ಈಜುಕೊಳವನ್ನು ನೀರಿನಿಂದ ತುಂಬಿಸಿ ನಿರ್ವಹಣೆ ಮಾಡುವುದು ಅವಶ್ಯಕವಾಗಿರುತ್ತದೆ. ಶಾಲಾ ಕಾಲೇಜುಗಳಿಗೆ ರಜೆ ಇರುವುದರಿಂದ ಈಜುಕೊಳದ ಆಸುಪಾಸಿನಲ್ಲಿ ವಾಸವಾಗಿರುವ ಮಕ್ಕಳ ಆರೋಗ್ಯ ಹಾಗೂ ಕ್ರೀಡೆಯ ಹಿತದೃಷ್ಟಿಯಿಂದ ಸದರಿ ಈಜುಕೊಳವನ್ನು ಶೀಘ್ರವಾಗಿ ಸಾರ್ವಜನಿಕರ ಸೇವೆಗೆ ಸಮರ್ಪಣೆ ಮಾಡಬೇಕಾಗಿರುತ್ತದೆ.

..........................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಈಜುಕೊಳವನ್ನು ಪಾಲಿಕೆಯಿಂದ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಸದರಿ ಈಜುಕೊಳದ ನಿರ್ವಹಣೆಯನ್ನು ಹೊರಗುತ್ತಿಗೆ ನೀಡಿ ನಿರ್ವಹಿಸಬೇಕಾಗಿರುತ್ತದೆ.

ಸದರಿ ಈಜುಕೊಳಕ್ಕೆ ಈಗಾಗಲೇ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಶ್ರೀ. ಜಿ.ಮೋಹನ್ ರವರು ರೂ.3.06 ಕೋಟಿ ಮೊತ್ತ ನಮೂದಿಸಿದ್ದು, ಹೆಚ್ಚು ಮೊತ್ತ ನಮೂದಿಸಿದ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಸದರಿ ಈಜುಕೊಳವನ್ನು 15 ದಿನಗಳಲ್ಲಿ ಪ್ರಾರಂಭಿಸಬೇಕಾಗಿರುವುದರಿಂದ ಮೇಲ್ಕಂಡ ಗುತ್ತಿಗೆದಾರರಿಗೆ ತಾತ್ಕಾಲಿಕವಾಗಿ ಇ-ಪ್ರಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ವಿಧಿಸಿರುವ ಷರತ್ತುಗಳಂತೆ ಈಜುಕೊಳದ ನಿರ್ವಹಣೆಯನ್ನು ತಾತ್ಕಾಲಿಕವಾಗಿ ಒಪ್ಪಂದ ಮಾಡಿಕೊಂಡು 3 ತಿಂಗಳ ಕಾಲ ಅಥವಾ ಘನ ಸರ್ಕಾರದ ಅನುಮೋದನೆ ದೊರೆಯುವವರೆಗೆ ಮುಂದುವರೆಸಿ ಸಾರ್ವಜನಿಕರ ಸೇವೆಗೆ ಈಜುಕೊಳವನ್ನು ಸಮರ್ಪಿಸಬೇಕಾಗಿರುತ್ತದೆ.

ಟೆಂಡರ್ ಕರಾರಿನಂತೆ ಗುತ್ತಿಗೆದಾರರು 20% of the Bid amount (ಗುತ್ತಿಗೆದಾರರು 10 ವರ್ಷಗಳ ಅವಧಿಗೆ ನಮೂದಿಸಿರುವ ಬಿಡ್ ಮೊತ್ತ ರೂ.3.06 ಕೋಟಿ) i.e., Rs.61.20 Lakhs ಹಾಗೂ 10% of the Bid amount i.e., Rs.30.60 Lakhs Additional Security deposit ಅನ್ನು ಬ್ಯಾಂಕ್ ಗ್ಯಾರಂಟಿ ಮುಖಾಂತರ ನೀಡಬೇಕಾಗಿರುತ್ತದೆ. ಗುತ್ತಿಗೆದಾರರೊಡನೆ ತಾತ್ಕಾಲಿಕವಾಗಿ ಈಜುಕೊಳವನ್ನು ನಿರ್ವಹಣೆ ಮಾಡುವ ಸಂಬಂಧ ಚರ್ಚಿಸಲಾಗಿದ್ದು, ಗುತ್ತಿಗೆದಾರರು ತಾತ್ಕಾಲಿಕವಾಗಿ ನಿರ್ವಹಣೆ ಮಾಡಲು ರೂ.25.00 ಲಕ್ಷಗಳ ಮುಂಗಡ ಹಣವನ್ನು (20% of the Bid amount i.e., Rs.61.20 Lakhs ಬದಲಾಗಿ) ಮತ್ತು ರೂ.10.00 ಲಕ್ಷಗಳ ಬ್ಯಾಂಕ್ ಗ್ಯಾರಂಟಿ Additional Security deposit (10% of the Bid amount i.e., Rs.30.60 lakhs ಗಳ ಬ್ಯಾಂಕ್ ಗ್ಯಾರಂಟಿ ಬದಲಾಗಿ). ಟೆಂಡರ್ ಕರಾರಿನಂತೆ 10 ವರ್ಷಗಳ ಅವಧಿಗೆ ಬಿಡ್ ಮೊತ್ತ ರೂ.3.06 ಕೋಟಿಗಳು ಮೊದಲನೆ ವರ್ಷದ Bid amount Rs.61.20 ಲಕ್ಷಗಳನ್ನು ಗಣನೆಗೆ ತೆಗೆದುಕೊಂಡಾಗ ಪ್ರತಿ ಮಾಹೆಗೆ ರೂ.3.01 ಲಕ್ಷಗಳು ಬಿಡ್ ಮೊತ್ತವಾಗಿರುತ್ತದೆ. ಸದರಿ ಗುತ್ತಿಗೆದಾರರು ಪ್ರತಿ ಮಾಹೆ ರೂ.3.01 ಲಕ್ಷಗಳನ್ನು ಪಾವತಿಸಲು ಒಪ್ಪಿರುತ್ತಾರೆ. ಸದರಿ ಹಣವನ್ನು ಮೊದಲನೇ ವರ್ಷದ ಬಿಡ್ ಮೊತ್ತದ ಲೆಕ್ಕಕ್ಕೆ (ಅಂದರೆ ರೂ.61.20 ಲಕ್ಷಗಳ ಲೆಕ್ಕಕ್ಕೆ) ಸೇರಿಸಿಕೊಳ್ಳಲು ಕೋರಿರುತ್ತಾರೆ ಮತ್ತು ತಾತ್ಕಾಲಿಕ ನಿರ್ವಹಣಾ ಅವಧಿಯನ್ನು, 10 ವರ್ಷಗಳ ಗುತ್ತಿಗೆ ಅವಧಿಯ ಲೆಕ್ಕಕ್ಕೆ ಪರಿಗಣಿಸಲು ಕೋರಿ ಈಜುಕೊಳದ ನಿರ್ವಹಣೆಯನ್ನು ತಾತ್ಕಾಲಿಕವಾಗಿ ನಿರ್ವಹಿಸಲು ಒಪ್ಪಿ ಗುತ್ತಿಗೆದಾರರಾದ ಶ್ರೀ. ಜಿ.ಮೋಹನ್‌ರವರು ಪತ್ರವನ್ನು ನೀಡಿರುತ್ತಾರೆ.

10 ವರ್ಷಗಳ ಅವಧಿಗೆ ಈಜುಕೊಳದ ಮೇಲ್ವಿಚಾರಣೆ ಹಾಗೂ ನಿರ್ವಹಣೆಯ ಟೆಂಡರ್ ಅನ್ನು ನಿಯಮಾನುಸಾರವಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ಪಾಲಿಕೆ ಸಭೆ ಹಾಗೂ ಘನ ಸರ್ಕಾರದಿಂದ ಅನುಮೋದನೆಯಾಗಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಗಣೇಶ ಮಂದಿರ ವಾರ್ಡ್ ಸಂಖ್ಯೆ:165ರ ಬನಶಂಕರಿ 2ನೇ ಹಂತ 17ನೇ ಅಡ್ಡರಸ್ತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನಿರ್ಮಾಣವಾಗಿರುವ ಈಜುಕೊಳದ ಮೇಲ್ವಿಚಾರಣೆ ಹಾಗೂ ನಿರ್ವಹಣೆಗಾಗಿ 10 ವರ್ಷಗಳ ಅವಧಿಗೆ ಹೊರಗುತ್ತಿಗೆ ನೀಡಲು ಕರೆದಿರುವ ಟೆಂಡರ್‌ನಲ್ಲಿ ಅತೀ ಹೆಚ್ಚು ಮೊತ್ತ ರೂ.3.06 ಕೋಟಿಗಳನ್ನು ನಮೂದಿಸಿರುವ ಅರ್ಹ ಗುತ್ತಿಗೆದಾರರಾದ ಶ್ರೀ. ಜಿ.ಮೋಹನ್‌ರವರ ಟೆಂಡರ್‌ಗೆ ಅನುಮೋದನೆ.

2. ಸದರಿ ಈಜುಕೊಳವನ್ನು ಮಾನ್ಯ ಗೃಹ ಹಾಗೂ ಸಾರಿಗೆ ಸಚಿವರ ಆದೇಶದಂತೆ 15 ದಿನಗೊಳಗಾಗಿ ಸಾರ್ವಜನಿಕರ ಸೇವೆಗಾಗಿ ಸಮರ್ಪಿಸಬೇಕಾಗಿರುವುದರಿಂದ ಈಜುಕೊಳದ ನಿರ್ವಹಣೆಗೆ ಪರ್ಯಾಯ ವ್ಯವಸ್ಥೆ ಇಲ್ಲದೆ ಇರುವುದರಿಂದ ಅನಿವಾರ್ಯವಾಗಿ ಟೆಂಡರ್‌ನಲ್ಲಿ ಭಾಗವಹಿಸಿ ಅತೀ ಹೆಚ್ಚು ದರ ನಮೂದಿಸಿರುವ ಶ್ರೀ.ಜಿ.ಮೋಹನ್‌ರವರ ಮುಖಾಂತರ ನಿರ್ವಹಿಸಲು ರೂ.25.00 ಲಕ್ಷಗಳ (20% of the Bid amount i.e., Rs.61.20 Lakhs ಬದಲಾಗಿ) ಹಾಗೂ ರೂ.10.00 ಲಕ್ಷಗಳ ಬ್ಯಾಂಕ್ ಗ್ಯಾರಂಟಿ (Additional Security deposit 10% of the Bid amount i.e., Rs.30.60 Lakhs ಗಳ ಬ್ಯಾಂಕ್ ಗ್ಯಾರಂಟಿ ಬದಲಾಗಿ) ಟೆಂಡರ್‌ನ ಪ್ರತಿ ಮಾಹೆಯ ಬಿಡ್ ಮೊತ್ತ ರೂ.3.01 ಲಕ್ಷಗಳನ್ನು ಪಾಲಿಕೆಗೆ ಪಾವತಿಸಿಕೊಂಡು ಟೆಂಡರ್‌ನ ಮೊದಲನೇ ವರ್ಷದ ಬಿಡ್ ಮೊತ್ತ ರೂ.61.20 ಲಕ್ಷಗಳ ಲೆಕ್ಕಕ್ಕೆ ಸೇರಿಸಿಕೊಳ್ಳುವ ಮತ್ತು ಇ-ಪ್ರಕ್ಯೂರ್‌ಮೆಂಟ್ ಟೆಂಡರಿನಲ್ಲಿ ವಿಧಿಸಿರುವ ಷರತ್ತಿಗೊಳಪಟ್ಟು ಅತೀ ಹೆಚ್ಚು ಮೊತ್ತ ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುವ ಶ್ರೀ.ಜಿ.ಮೋಹನ್‌ರವರೊಡನೆ 3 ತಿಂಗಳ ಕಾಲ ಅಥವಾ ಘನ ಸರ್ಕಾರದ ಅನುಮೋದನೆಯಾಗುವವರೆಗೆ ನಿರ್ವಹಿಸಲು ಅನುಮೋದನೆ. ಸಭೆ ಹಾಗೂ ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ತಾತ್ಕಾಲಿಕ ಒಪ್ಪಂದ ಮಾಡಿಕೊಂಡು ಈಜುಕೊಳದ ನಿರ್ವಹಣೆಯನ್ನು ತಾತ್ಕಾಲಿಕವಾಗಿ ನಿರ್ವಹಿಸಲು ಕಾರ್ಯಾದೇಶ ನೀಡುವ ಬಗ್ಗೆ ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:10-05-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪುತ್ತಾ, ಪಾಲಿಕೆ ಸಭೆ ಮುಂದೆ ಮಂಡಿಸಲು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 01-06-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:01-06-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 01-06-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 31-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 225 /2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಂದಿಕೊಂಡಂತೆ ಇರುವ ಎಲೆಕ್ಟ್ರಾನಿಕ್ ಸಿಟಿ ಪ್ರದೇಶವನ್ನು [ಕೋನಪ್ಪನ ಅಗ್ರಹಾರ, ದೊಡ್ಡ ತೋಗೂರು, ಗೊಲ್ಲಹಳ್ಳಿ, ಬಾಲಾಜಿ ಬಡಾವಣೆ, ಶಿಕಾರಿಪಾಳ್ಯ, ನೀಲಾದ್ರಿನಗರ, ಬೆಟ್ಟದಾಸಪುರ, ಹುಲಿಮಂಗಲ, ಗೋವಿಂದಶೆಟ್ಟಿಪಾಳ್ಯ, ಕೃಷ್ಣಾರೆಡ್ಡಿ ಬಡಾವಣೆ, ನಿಯೋ ಟೌನ್, ಶಾಂತಿಪುರ, ವೀರಸಂದ್ರ ಕೈಗಾರಿಕಾ ಪ್ರದೇಶ ಮತ್ತು ವೀರಸಂದ್ರ ಗ್ರಾಮಗಳು ಸೇರಿದಂತೆ] ಅಂದರೆ ಎಲೆಕ್ಟ್ರಾನಿಕ್ ಸಿಟಿ 1ನೇ ಹಂತ, 2ನೇ ಹಂತ ಮತ್ತು 3ನೇ ಹಂತದ ಪ್ರದೇಶಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ಬಗ್ಗೆ ಘನ ಸರ್ಕಾರವನ್ನು ಕೋರಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಂದಿಕೊಂಡಂತೆ ಇರುವ ಎಲೆಕ್ಟ್ರಾನಿಕ್ ಸಿಟಿ ಪ್ರದೇಶವನ್ನು [ಕೋನಪ್ಪನ ಅಗ್ರಹಾರ, ದೊಡ್ಡ ತೋಗೂರು, ಗೊಲ್ಲಹಳ್ಳಿ, ಬಾಲಾಜಿ ಬಡಾವಣೆ, ಶಿಕಾರಿಪಾಳ್ಯ, ನೀಲಾದ್ರಿನಗರ, ಬೆಟ್ಟದಾಸಪುರ, ಹುಲಿಮಂಗಲ, ಗೋವಿಂದಶೆಟ್ಟಿಪಾಳ್ಯ, ಕೃಷ್ಣಾರೆಡ್ಡಿ ಬಡಾವಣೆ, ನಿಯೋ ಟೌನ್, ಶಾಂತಿಪುರ, ವೀರಸಂದ್ರ ಕೈಗಾರಿಕಾ ಪ್ರದೇಶ ಮತ್ತು ವೀರಸಂದ್ರ ಗ್ರಾಮಗಳು ಸೇರಿದಂತೆ] ಅಂದರೆ ಎಲೆಕ್ಟ್ರಾನಿಕ್ ಸಿಟಿ 1ನೇ ಹಂತ, 2ನೇ ಹಂತ ಮತ್ತು 3ನೇ ಹಂತದ ಪ್ರದೇಶಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ಬಗ್ಗೆ ಘನ ಸರ್ಕಾರವನ್ನು ಕೋರಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ ಮೂರ್ತಿ)
ಮಹಾಪೌರರು

# ದಿನಾಂಕ:31-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ : 226/ 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಕ್ಕುಪತ್ರ / ನೊಂದಾವಣೆ ಪತ್ರಗಳು ಇಲ್ಲದೇ / ಪಡೆಯದೇ ಇರುವವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಲವಾರು ನಿವಾಸಿಗಳು ಮನೆಗಳಿಲ್ಲದೇ ವಾಸ ಮಾಡುತ್ತಿರುತ್ತಾರೆ. ಅಂತಹವರಿಗೆ ಶೇಕಡ 22.75ರ ಅನುದಾನ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವ ಅನುದಾನದಲ್ಲಿ ಮನೆಗಳನ್ನು ನಿರ್ಮಿಸಲು, ಚುನಾವಣೆ ಗುರುತಿನ ಚೀಟಿ ಅಥವಾ ಪಡಿತರ ಚೀಟಿ, ಜಾತಿ ಪ್ರಮಾಣ ಪತ್ರ / ಪ್ರಮಾಣ ಪತ್ರವನ್ನು ದಾಖಲೆ ಎಂದು ಪರಿಗಣಿಸುವುದು ಹಾಗೂ ಕಟ್ಟಡಗಳನ್ನು ನಗರ ಪಾಲಿಕೆಯೇ ನಿರ್ಮಿಸುತ್ತಿರುವುದರಿಂದ ಸದರಿ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ಅಗತ್ಯವಿರುವುದಿಲ್ಲ"..

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಕ್ಕುಪತ್ರ / ನೊಂದಾವಣೆ ಪತ್ರಗಳು ಇಲ್ಲದೇ / ಪಡೆಯದೇ ಇರುವವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಲವಾರು ನಿವಾಸಿಗಳು ಮನೆಗಳಿಲ್ಲದೇ ವಾಸ ಮಾಡುತ್ತಿರುತ್ತಾರೆ. ಅಂತಹವರಿಗೆ ಶೇಕಡ 22.75ರ ಅನುದಾನ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವ ಅನುದಾನದಲ್ಲಿ ಮನೆಗಳನ್ನು ನಿರ್ಮಿಸಲು, ಚುನಾವಣೆ ಗುರುತಿನ ಚೀಟಿ ಅಥವಾ ಪಡಿತರ ಚೀಟಿ, ಜಾತಿ ಪ್ರಮಾಣ ಪತ್ರ / ಪ್ರಮಾಣ ಪತ್ರವನ್ನು ದಾಖಲೆ ಎಂದು ಪರಿಗಣಿಸುವುದು ಹಾಗೂ ಕಟ್ಟಡಗಳನ್ನು ನಗರ ಪಾಲಿಕೆಯೇ ನಿರ್ಮಿಸುತ್ತಿರುವುದರಿಂದ ಸದರಿ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ಅಗತ್ಯವಿರುವುದಿಲ್ಲವೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು